సంపుటి. 2

1940

ప్రథమ ముద్రణ

13-7-1940

వెల రూ. 1 మాత్ర

ప్రతులు 1000 32.

REG M. 3937 ಸಂದೇಶಾತ್ಮರು . ಮೂರನೆಯ ಸಾಹಿತ್ಯ ಸಂಚಿಕೆ.

THE ನವ ಭಾರತ

ನವ ಭಾರತ

(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್ ಸಮಾವೇಶವಾಗಿದೆ)

ಉಜ್ವಲ-ರಾಷ್ಟ್ರೀಯ ವಾರ ಪತ್ರಿಕೆ

ಸಂಪಾದಕ — ಟಿ. ಬಿ. ಕೇಶವರಾವ್. ಬಿಡಿ ಸಂಚಿಕೆ

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ. 0—1—0.

ವರ್ಷ ೩ | ಬಳ್ಳಾರಿ ಜೂಲೈ ೧೩ ನೇ ಶನಿವಾರ ೧೯೪೦ | ಸಂಚಿಕೆ ೧



ಈಗಿನ ಯುದ್ಧಗಳಲ್ಲಿ - ಆಕಾಶವಿನಾಶನದಿಂದ - ಬಾಂಬು ಸುರಿಸುವಿಕೆಯೇ - ಯುದ್ಧದ ಪರಿಣಾಮವನ್ನು ನಿರ್ಣಯಿಸುವುದು. ನಿನ್ನೆ ಷಾರ್ಧದಲ್ಲಿ ದೊಡ್ಡ ದೊಡ್ಡ ಪಟ್ಟಣಗಳನ್ನು ನೆಲಸಮ ಮಾಡುವ ಬಾಂಬುಗಳನ್ನು ಇಂಥಾ ವಿಮಾನಗಳು ಸಾಗಿಸುತ್ತವೆ. ಮೇಲ್ಕಾಣಿಸಿದ ೩ ಬ್ರಿಟಿಶ ಬಾಂಬರುಗಳು. ಫ್ರಾನ್ಸಿನಲ್ಲಿ ಬ್ರಿಟಿಶ ಸೈನ್ಯಗಳಿಗೆ ಸಹಾಯಮಾಡಲು ಹೋಗಿದ್ದವು.

ತುಂಗಭದ್ರಾ ಆಣೆಕಟ್ಟು.

[೧] ಪೂರ್ವದಿಕ್ಕಿನಲ್ಲಿ ಹೊಸಪೇಟೆಯ ಭಾಗದ ಪರ್ವತಶ್ರೇಣಿ.



ಸುಮಾರು ೩೧ ಪರ್ವಗಳ ಕೆಳಗೆ ಮೃತ್ತಿಕಾಣೆಯಬಹುದು ಇಲ್ಲಿ ಕೆಲ ಕಟ್ಟಿಬೀಕೆಂದು ತಗ್ಗನ್ನು ತೋರಿಸಿರುವರು. ಇದು ಸುಮಾರು ೫೦ ಅಡಿ ಆಳವಾಗಿದೆ. ಸದಿಯು ಸಮೀಪದವರಿಗೂ ಅಗೆದಿರುವ ಇಲ್ಲಿ ಸರ್ಕಾರದವರು ತುಂಗಭದ್ರಾ ಕೆರೆಯನ್ನು ಕಟ್ಟುವ ಪ್ರದೇಶ (Thungabhadra Alignment) ಎಂದು ಬೋರ್ಡು ಹಾಕಿರುವರು. ಈ ಚಿತ್ರದಲ್ಲಿ ಅಗೆದಿರುವ ಪ್ರದೇಶವನ್ನು ಕಾಣಬಹುದು.



[೨] ಪಶ್ಚಿಮ ದಿಕ್ಕಿನಲ್ಲಿನ ಹೈದರಾಬಾದ್ ಸರಹದ್ದಿನ ಪರ್ವತಶ್ರೇಣಿ

ತುಂಗಭದ್ರಾನದಿ ಮತ್ತು ಹೈದರಾಬಾದ್ ಸರಹದ್ದಿನಲ್ಲಿರುವ ಪರ್ವತಗಳು. ಹೊಸಪೇಟೆ ಪರ್ವತಗಳಿಗೂ (ಅಗೆದಿರುವ ಪ್ರದೇಶದಿಂದ) ಚಿತ್ರದಲ್ಲಿ ಕಾಣುವ ಪರ್ವತಗಳಿಗೂ ಮಧ್ಯ ಕೆರೆಯು ಕಟ್ಟಲ್ಪಡುವುದು.

ಜೂಲೈ 13, 1940

'ನವಭಾರತ'ದ ಶುಭೇಚ್ಛೆ.

'ನವಭಾರತ'ವು 3ನೆಯ ವರ್ಷದಲ್ಲಿ ಹೆಜ್ಜೆ ಇಡುತ್ತಲಿದೆ. ಈ ಸಮಯದಲ್ಲಿ ಸಹಾಯಮಾಡಿದ ಸರ್ವರಿಗೂ ಚಾಲಕರು ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸುತ್ತಾರೆ. ಮುಂದೆಯೂ ಕೂಡ ತಕ್ಕ ಪ್ರೋತ್ಸಾಹವು ದೊರೆಯುವುದೆಂಬ ಆಶಯವನ್ನಿಡಲಾಗಿದೆ.

'ನವಭಾರತ'ದ ನೀತಿಯು ಅಖಿಲ ಭಾರತ ಕಾಂಗ್ರೆಸ್ಸಿನ ನೀತಿ. ಅದರ ರೀತಿ ನೀತಿಗಳಿಗೊಳಪಟ್ಟು ರಾಷ್ಟ್ರೀಯ ತತ್ವದ ಪ್ರಚಾರ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೆಂಬಲ, ಹಿಂದೂಸ್ಥಾನ ಸರಕೇಶಗಳ ಮುಖ್ಯವಾದ ಸುದ್ದಿ ಸಮಾಚಾರಗಳನ್ನು ಶಕ್ತ್ಯಾನುಸಾರ ಪ್ರಕಟಿಸುತ್ತಬಂದಿದೆ. ಅದಕ್ಕೆ ಇಚ್ಛಿಸಲ್ಪಟ್ಟಂದಾವಿಂದ ನಮ್ಮ ಆಕಸ್ಮಿಕವಾಗಿ ಆರಂಭವಾದ ಯುದ್ಧದ ಕಾರಣದಿಂದ ಚಾಲಕರಿಗೆ ಅರ್ಥಕಷ್ಟವುತಲಿ ಸಾಲವಾಯಿತು. ಆದರೂ ಎದೆ ಗುಂದದೆ ಕನ್ನಡನಾಡಿನ ಕನ್ನಡ ಭಾಷೆಯ ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ಸೇವೆಯು, ಯಥಾವಥ್ ಸಾಗಿದೆಯೆಂದು ಹೇಳಲ್ಪ ಸಂತೋಷಿಸುತ್ತೇನೆ.

ಕ್ಷಾಮ ಪೀಡಿತವಾದ ಈಜಿಲೆಗಳು ತುಂಗಭದ್ರಾ - ಯೋಜನೆಯು ಪೂರ್ಣವಾಗುವುದರ ಮೂಲಕ ಅಧಿಕ ಸಂಖ್ಯದಿಂದ ಪಾರಾಗಿ ಇಂಥಾ ರಾಷ್ಟ್ರೀಯ ಸಂಸ್ಥೆಗಳನ್ನು ಈ ನಾಡಲು ಶಕ್ತ್ಯಸಂಪನ್ನವಾಗಲೆಂದು ಹಾರೈಸುತ್ತೇವೆ.

ಇದೇ 'ನವಭಾರತ' ದ ಶುಭೇಚ್ಛೆ.

ತುಂಗಭದ್ರಾ - ಅಣೆಕಟ್ಟು.

(ಟಿ. ಪಿ. ಕೇಶವರಾವು)

ಮದ್ರಾಸ್ ಪ್ರಾಂತ್ಯದಲ್ಲಿ ಅರೂಢವಾದ ಕಾಂಗ್ರೆಸ್ ಸರಕಾರವು ಕಳೆದ ಶತಮಾನದಿಂದಲೂ ಚರ್ಚಾಸ್ಪದವಿದ್ದ ಈ ತುಂಗಭದ್ರಾ ಅಣೆಕಟ್ಟಿನ ಸಮಸ್ಯೆಯನ್ನು ಬಿಡಿಸಿ ಇದನ್ನು ಪ್ರಾರಂಭಿಸಲು ಯೋಚಿಸುತ್ತಿರುವಾಗ ಮಹಾ ಯುದ್ಧವು ಪ್ರಾರಂಭವಾಯಿತು. ಮುಖ್ಯ ಮಂತ್ರಿಗಳಾದ ಶ್ರೀ ಶಿ. ರಾಜಗೋಪಾಲಾಚಾರ್ಯರು ಬಹಳ ಕೃಷಿಮಾಡಿದರು ದಿವಂಗತ ಯಾಕೂಬ್ ಹಸನ್ (ಡೆವಲಪ್‌ಮೆಂಟ್ ಮಂತ್ರಿ ಯವರು ಹೈದ್ರಾಬಾದ್ ಸರಕಾರದೊಡನೆ ಒಂದು ಒಪ್ಪಂದಕ್ಕೆ ಬಂದರು. ದತ್ತ ಮಂಡಲದ ಕ್ಷಾಮದ ಶಾಶ್ವತ ನಿವಾರಣೆಗಾಗಿ ಇಂಥಾ ಸುಧೃಡ ಪ್ರಯತ್ನಗಳು ಕಾರ್ಯರೂಪಕ್ಕೆ ಬರುವ ಕಾಲವನ್ನು ಎಲ್ಲರೂ ಬಾಯ್ಬಿಟ್ಟುಕೊಂಡು ನೋಡುತ್ತಿರಲು ಯುದ್ಧದ ಸಿಡಿಲಿನಬಿಸಿ ಬೇಗೆಗಳು ಎಲ್ಲರಿಗೂ ತಗಲಿದವು. ಮದ್ರಾಸ್ ಸರಕಾರದವರು ಯತ್ನಗಳನ್ನು ಬಿಟ್ಟಂತೆ ಕಾಣಲಿಲ್ಲ. ಮದ್ರಾಸ್ ಭಾಗದಿಂದ ಬಂದ ಒಬ್ಬ ಸ್ಪೆಶಲ್ ಇಂಜಿನಿಯರ್ ರವರ್ ಇದರ ಕೂಲಂಕಷ ವಿಮರ್ಶೆಮಾಡಿ ಸರಕಾರದವರು ಬೇಡಿದ ರೀತಿಯಲ್ಲಿ 'ಅಂದಾಜು ಪಟ್ಟಿ'ಗಳನ್ನು ಒದಗಿಸುವಲಿರುವರೆಂದು ಕೇಳುತ್ತೇವೆ.

19ನೆಯ ಶತಮಾನದ ಉತ್ತರಾರ್ಧ ಭಾಗದಿಂದ ಸರ್ಕಾರದವರು ತುಂಗಭದ್ರಾ ಅಣೆಕಟ್ಟಿನ ಬಗ್ಗೆ ಅನೇಕ ಯೋಜನೆಗಳನ್ನು ವಿಮರ್ಶಿಸಿ - ಬಳ್ಳಾರಿ ಅನಂತಪುರ ಕರ್ನೂಲು ಜಿಲ್ಲೆಗಳಲ್ಲಿ ಎಷ್ಟು ಎಕರೆ ನೀರಾವರಿಯಾದೀತೆಂಬ ಅಂಶಕ್ಕೆ ಅನೇಕ ಸಾಧಕ ಬಾಧಕಗಳನ್ನು ವಿಮರ್ಶಿಸಿರುವರು ಆದರೆ ಇತ್ತೀಚೆಗೆ 1933 ರಲ್ಲಿ ಚೀಫ್ ಎಂಜಿನಿಯರ್ ರವರಾದ ಶ್ರೀ ಸ್ವಾಮಿನಾಥಯ್ಯರ್‌ರವರು ಒಪ್ಪಿಸಿದ ಯೋಜನೆಯೇ ಸರಕಾರದ ಲಕ್ಷ್ಯಕ್ಕೆ ಬಂದಂತೆ ಕಾಣುತ್ತದೆ.

ಈ ಯೋಜನೆಯ ಪ್ರಕಾರ ಹೊಸಪೇಟೆಯ ಸಮೀಪದಲ್ಲಿನ ಮಲ್ಲಾಪುರದ ಹತ್ತರ ಒಂದು ಅಣೆಕಟ್ಟನ್ನು ಕಟ್ಟಿ ಅಲ್ಲಿ ಸಂಗ್ರಹವಾಗುವ ನೀರನ್ನು ಮದ್ರಾಸ್ ಮತ್ತು ಹೈದ್ರಾಬಾದ್ ಸರಕಾರಗಳು ಸಮವಾಗಿ ಹಂಚಿಕೊಳ್ಳಬೇಕು. ಮದ್ರಾಸ್ ಪ್ರಾಂತ್ಯದ ಭಾಗದಲ್ಲಿ ಜೂನ್ ತಿಂಗಳಿಂದ ಸೆಪ್ಟಂಬರ್ ತಿಂಗಳವರೆಗೆ 6,22,500 ಎಕರೆಗಳವರೆಗೆ (DRY-CROP - KHARIF) ಮತ್ತು ಅಕ್ಟೋಬರ್ ತಿಂಗಳಿಂದ - ಫೆಬ್ರುವರಿವರೆಗೆ 4,50,000 ಎಕರೆಗಳವರೆಗೆ (Dry crop - Rabi) ಈ ಪ್ರಕಾರ ಈ ಎರಡು ಋತುಗಳ ಒಟ್ಟಿನ ಬೆಳೆಯಲ್ಲಿ 1,072,500 ಎಕರೆಗಳಲ್ಲಿ ! ಒಣಬೆಳೆಗೆ ಅವಕಾಶವೀಯಲಾಗಿದೆ. ಮೆಕನ್ಜೀಯವರ ಯೋಜನೆಯಲ್ಲಿ ಎರಡು ತಿಂಗಳ ಒಣಬೆಳೆಗೆ ಮಾತ್ರ ಅವಕಾಶವೀಯಲಾಗಿತ್ತು. ಐರ್ಲಂಡರವರ ಯೋಜನೆಯಲ್ಲಿ ಎಲ್ಲಾ ನೀರಾವರಿ ಬೆಳೆಯೇ ಇದ್ದಿತು.

ಮೊದಲನೆಯ ಭಾಗದಲ್ಲಿ 1933ರ ಯೋಜನೆಯ ಪ್ರಕಾರ ಜೋಳ ನವಣೆ ಸಜ್ಜೆ ಮತ್ತಿತರ ಸಾಮಾನ್ಯಧಾನ್ಯಾದಿಗಳು ಎಣ್ಣೆ ಬೀಜಗಳನ್ನೂ, ಎರಡನೆಯ ಋತುವಿನಲ್ಲಿ ಹತ್ತಿಯನ್ನೂ ಬೆಳೆಯ ಬಹುದಾಗಿದೆ. ಮೊದಲನೆಯ ಧಾನ್ಯಾದಿಗಳು ಕೆಂಪು ಮಿಶ್ರಿತ, ಸಾಮಾನ್ಯ ಕಪ್ಪು ಭೂವಿಗಳಲ್ಲೂ, ಹತ್ತಿಯು ಪಕ್ಕಾ ಎರೆಯ ಭೂವಿಯಲ್ಲೂ ಬೆಳೆಯ ತಕ್ಕದ್ದು. ವ್ಯಾಪಾರದೃಷ್ಟಿಯಿಂದ ಪ್ರಾರಂಭದಲ್ಲಿ ನೆಲಗಡಲೆಯನ್ನು ಕೂಡ ಬೆಳೆಯುವುದರಲ್ಲಿ ಅಡ್ಡಿಯಿಲ್ಲ. ಎರಡನೆಯ ಸಲವೂ ಧಾನ್ಯಾದಿಗಳನ್ನು ಬೆಳೆಯಬಾರದೆಂಬ ಸೂಚನೆಗೆ ಈ ಕೆಳಗಿನ ಎರಡು ಕಾರಣಗಳುಂಟು.

1) ಭೂಗುಣವು ನಿಸ್ಸಾರವಾಗುವುದು. 2) ಅದು ಎರಡನೆಯ ಬೆಳೆಯಿಂದ ಮಿಸ್ಸನ್ನು ಕಡಮೆಮಾಡಲು ಬರುವಂತಿಲ್ಲ. ಅನುಕೂಲವಾದ ಭೂಮಿಗಳಲ್ಲಿ ಮಾತ್ರ ಭತ್ತದ ಬೆಳೆಗೆ ಅವಕಾಶಕೊಡಲಾಗುವುದು.

ಮದ್ರಾಸ್ ಮತ್ತು ಹೈದ್ರಾಬಾದ್ ಸರಕಾರದವರು ಪ್ರತಿಯೊಬ್ಬರೂ 112 T. M. ಕ್ಯುಬಿಕ್‌ಫೀಟ್ ನೀರನ್ನು ಹೊಂದುವರೆಂದೂ, ಮದ್ರಾಸ್ ಸರಕಾರದ ಹಕ್ಕೈಗೆ ಸುಬದ್ಧಿಸಿದಷ್ಟು ನೀರಿನ ಲೆಕ್ಕದ ಮೇಲೆ ಈಗಿನ ಚೀಫ್ ಎಂಜಿನಿಯರ್ ರವರು ಒಂದಲ್ಲ ನಾಲ್ಕು ಸ್ಕೀಂಗಳನ್ನು ಮುಂದಿಟ್ಟಿರುವಂತಿದೆ. 1933 ರಲ್ಲಿ ಶ್ರೀ ಸ್ವಾಮಿ ನಾಥಯ್ಯರ್ ರವರು ಒಪ್ಪಿಸಿದ ಪೂರ್ಣ ಯೋಜನೆಯವರಿವಿಗೂ ಸದರಿ ಸ್ಕೀಮುಗಳನ್ನು ವಿಸ್ತರಿಸಬಹುದು.

ಸಿರುಗುಪ್ಪೆ ವ್ಯವಸಾಯ ಪರೀಕ್ಷಾ ಕೇಂದ್ರದಲ್ಲಿ ತುಂಗಭದ್ರಾ ನೀರಿನಿಂದ ಭೂಗುಣ ಮತ್ತು ಬೆಳೆಯ ವಿಷಯವು

(31-ನೇ ಪುಟ ನೋಡಿರಿ)

ನನ್ನ ಶಾಲೆ.

ಲೇಖಕ.— ಶಿವರುದ್ರ

ನಾನು ಒಂದು ಬಡ ಕುಟುಂಬದಲ್ಲಿ ಹುಟ್ಟಿದವನು. ನನಗೆ ಇಬ್ಬರು ಅಣ್ಣಂದಿರು. ಅವರು ಹೆಚ್ಚಿನ ಶಿಕ್ಷಣಹೊಂದಲು ಶಕ್ಯವಿಲ್ಲದುದರಿಂದ ಆರನೆ ತರಗತಿ ವಾಸಾಗಿ, ಟ್ರೈನಿಂಗು ಮುಗಿಸಿ ಉಪಾಧ್ಯಾಯ ವೃತ್ತಿಯನ್ನು ಕೈಕೊಂಡಿದರು.

ನಮ್ಮಣ್ಣನು, ತಾನು ಉದ್ಯೋಗಕ್ಕೆ ಬಂದಮೇಲೆ, ಹೇಗಾದರೂ ಮಾಡಿ ನನ್ನನ್ನು ಸುಶಿಕ್ಷಿತನಾಗುವಂತೆ ಮಾಡಬೇಕೆಂಬ ವಿಶ್ವ ಪ್ರಯತ್ನಪಟ್ಟನು. ಆತನಿಗೆ ನೂರೆಂಟು ಕೊರತೆಗಳಿದ್ದರೂ ನನ್ನ ವಿದ್ಯಾಭ್ಯಾಸಕ್ಕೆ ಎಳ್ಳಷ್ಟು ತೊಂದರೆ ಕೊಡಲಿಲ್ಲ. ನಾನು ವಿದ್ಯಾವಂತನಾದರೆ ದೊಡ್ಡ ಉದ್ಯೋಗ ದೊರೆಯುವದೆಂದು ಆತನ ಹೆಬ್ಬಯಕೆ.

ನಾನೂ ಆತನ ಇಷ್ಟಾರ್ಥವನ್ನು ಕೈಗೂಡಿಸಬೇಕೆಂದು ಅತ್ಯಂತ ಶ್ರಮವಹಿಸಿ ಓದಿದೆವು. ಆಗಲೇನು ಆ ಗಣಿತ ಶಾಸ್ತ್ರವು ನನ್ನ ಜೀವನಾಪನ್ನು ಹಾಳು ಮಾಡಿತು. ಸ್ಕೂಲ್ ಫೈನಲ್ನಲ್ಲಿ ನೇಲಾದೆ. ಮತ್ತೂ ಪ್ರಯತ್ನ ಮಾಡಿದೆ, ನಿಷ್ಫಲ. ನಮ್ಮಣ್ಣನ ಆ ಶಿ ನಿರಾಶೆಯಾಯಿತು. ದೈವಲೀಲಾ ವಿಲಾಸವು ಹೀಗಿರುವಾಗ ಯಾರೇನು ಮಾಡುವರು?

ಅಲ್ಲಿಂದಲೂ ನಿರುದ್ಯೋಗ ಸಮಸ್ಯೆಯು ನನ್ನ ಕೊರಳಿಗೆ ಹತ್ತಿತು. ಕಂಡ ಕಂಡವರನ್ನು ಕೇಳಿ ಕಾಗಟ್ಟು ಕಳವಳಗೊಂಡೆನು.

ನಮ್ಮ ಮನೆತನದವರು ಮೊದಲಿಂದಲೂ ಶಿಕ್ಷಕವೃತ್ತಿಯನ್ನೇ ನಾಡುತ್ತಿದ್ದರು ನಮ್ಮಣ್ಣನವರೂ ಅದೇ ವೃತ್ತಿಯನ್ನು ಕೈಕೊಂಡಿದ್ದರು. ಈ ಉದ್ಯೋಗ ಕ್ಕಾಗಿ ಊರಿಂದ ಊರಿಗೆ ಅಲೆದಾಡಿದ ನಾನು ನಿರಾಶನಾದೆ. ಸ್ವತಂತ್ರ ಜೀವನವನ್ನು ನಡೆಸಬೇಕಾದರೆ, ಸಮಾಜ ಸೇವೆ ಮಾಡಬೇಕಾದರೆ, ಉತ್ಕೃಷ್ಟಾರ ಹೊಂದಬೇಕಾದರೆ ಶಿಕ್ಷಕ ವೃತ್ತಿಯೇ ಶ್ರೇಷ್ಠವಾದುದೆಂದು ಟ್ರೈನಿಂಗು ಮುಗಿಸಿ ಒಂದು ಹಳ್ಳಿಯಲ್ಲಿ ಪಡೆದ್ದು ಸ್ಕೂಲನ್ನು ತೆರೆದನು. ಗ್ರಾಂಟು ಮುಂಜೂರಾಯಿತು. ಶಾಲೆಯು ಅತ್ಯಂತ ಅಭಿವೃದ್ಧಿಹೊಂದಿತು.

ಅನಾದಿ ಕಾಲದಿಂದಲೂ ನಡೆದು ಬಂದಂತೆ ಭಾಸಗಿ ಶಾಲೆಗಳೆಲ್ಲಿ ದೇವಾಲಯಗಳಲ್ಲಿಯೂ ಮತಗಳಲ್ಲಿಯೂ ಇರುವಂತೆ ನನ್ನ ಶಾಲೆಯೂ ಊರ ಹನುಮನಗುಡಿಯಲ್ಲಿತ್ತು.

ಏತನ್ಮಧ್ಯೆ ಶಾಲೆಗಳನ್ನು ದೇವಾಲಯಗಳಲ್ಲಿಡಕೂಡದು ಹಾಗೆ ಶಾಲೆಗಳಿಟ್ಟರೆ ಹರಿಜನರಿಗೆ ವಿದ್ಯಾಭ್ಯಾಸಕ್ಕೆ ಪ್ರತಿಬಾಧಕವಾಗುತ್ತದೆ. ಇನ್ನು ಮೇಲೆ ಹಾಗೆ ಇಟ್ಟ ಶಾಲೆಗಳನ್ನು ಗ್ರಾಂಟು ಪಟ್ಟಿಯಿಂದ ತೆಗೆದು ಹಾಕಬೇಕಾಗಿ ಬರುತ್ತದೆಂದು ಸರಕಾರದಿಂದ ನೋಟೀಸು ಬಂತು.

ಹಳ್ಳಿಗಳಲ್ಲಿ ಸಾಧಾರಣ ಶಾಲೀ ಮನೆಯು ಕಟ್ಟುವುದು ಬಹಳ ಕಷ್ಟ. ಶಿಕ್ಷಕರೂ ವಿಶಾಲವಿದೆ, ಒಕ್ಕಲ ತನಕ್ಕೆ ಅನುಕೂಲವಾಗುವಂತೆ ಕಟ್ಟಿಸುತ್ತಾರೆ. ಹೊಸ ಮನೆಯನ್ನು ಕಟ್ಟಿಸೋಣವೆಂದರೆ ಊರಲ್ಲಿ ಸಂಘಟನೆಯಿಲ್ಲ.

ಊರಲ್ಲಿನ್ನ ಶ್ರೀಮಂತರ ಮಕ್ಕಳು ನನ್ನ ಶಾಲೆಯ ಶಿಕ್ಷಣ ಮುಗಿಸಿ ಉಚ್ಚ ಶಿಕ್ಷಣಕ್ಕಾಗಿ ಬಳ್ಳಾರಿ ಸೇರಿದ್ದರು. ಪ್ರಯುಕ್ತ ಆ ಶ್ರೀಮಂತರು ಶಾಲಾಭಿವೃದ್ಧಿಯ ಕಡೆಗೆ ಗಮನ ಕೊಡರು. ಹಾಗೂ ಹೀಗು ಒಂದು ಪರ್ಣಶಾಲೆಯನ್ನು ಕಟ್ಟಿಸಿದೆನು. ಹರಿಜನರ ಕೇರಿಗೆ ಹೋಗಿ ಮಕ್ಕಳನು, ಇನ್ನೂ ಹೆಚ್ಚಾಗಿ ಶಾಲೆಗೆ ಕಳುಹಿಸಿಕೊಡುವಂತೆ ಹೇಳಿದೆನು. ಗ್ರಾಮಾಧಿಕಾರಿಗಳಿಂದಲೂ ಹೇಳಿಸಿದೆನು. ಆದರೇನು, ಹೊಟ್ಟೆಗೆ ಕೊಟ್ಟು ಇಲ್ಲದಿರುವಾಗ ಬಟ್ಟೆಗೆ ಯಲ್ಲಿಗೆ ಹೊಸುತ್ತುವುದಾದೀತೆ?

ಏಳು ವರ್ಷದ ಬಾಲಕನೂ ಎರಡನೆ ಮನೆಯಲ್ಲಿ ಆಳಾಗಿರುತ್ತಾನೆ. ಹೆಣ್ಣು ಹುಡುಗಿಯರಾದರೂ ಬಂದಾರೇಂದರೆ ಅವರ ಕೊರಳಿಗೆ ಅವರ ತಂಗಿಯಾ ತಮ್ಮಂದಿರನ್ನು ಪೋಷಣೆಮಾಡುವ ಭಾರವು ಇರುತ್ತದೆ. ಅದಿ ಕರ್ನಾಟಕ ಮಾತೆಯರು, ಪ್ರಸವವಾದ ತಿಂಗಳಲ್ಲಿ ಹೆತ್ತಬತ್ತಿಗಳನ್ನು ತಮ್ಮ ಏಳೆಂಟು ವರ್ಷದ ಬಾಲಕಿಯರ ನಡಿಲಲ್ಲಿ ಹಾಕಿ ಹೊಟ್ಟೆಪಾಡಿಗಾಗಿ ಕೂಲಿ ಹೋಗುತ್ತಾರೆ.

ಒಂಭತ್ತು ಹತ್ತು ವರ್ಷದ ಬಾಲಕಿಯಾದರೂ ಶಾಲೆಗೆ ಬಂದಾರೆಂದರೆ ಅವರಿಗೂ ಮೈತುಂಬ ಕೆಲಸ. ಇಷ್ಟಿದ್ದರೂ ನನ್ನ ಪ್ರಯತ್ನವನ್ನು ಬಿಡದೆ ಮೇಲಿಂದ ಮೇಲೆ ಹರಿಜನರ ಕೇರಿಗೆ ಹೋಗಿ ಅವರನ್ನು ಒತ್ತಾಯ ಪಡಿಸಲು ಅವರಲ್ಲಿ ಕೆಲವರು ತಮ್ಮ ಕಷ್ಟಗಳನ್ನು ತೋಡಿಕೊಂಡರು. ಕೆಲವು ಮನೆಗಳಲ್ಲಿ ಅಬಲಾವೃದ್ಧರೂ ಒಂದೊಂದು ದಿನವಪೂ ಅಖಂಡ ಉಪವಾಸ ಮಾಡುತ್ತ ಮಲಗಿರುವುದನ್ನು ನಾನು ನೋಡಿದೆನು. ಮಕ್ಕಳಂತು ಹೊಟ್ಟೆಗೆ ಅನ್ನವಿಲ್ಲದೆ ಭಿಕಾರಿಗಳಂತೆ ಬೀದಿಗಳಲ್ಲಿ ಬಿಕ್ಕೆ ಬೇಡುತ್ತಿರುತ್ತಾರೆ.

ನಾನು ಒಹಳ ಒತ್ತಾಯಪಡಿಸಲು ಸ್ವಾಮೀ ನೀವೇನೊ ಇಸ್ಕೂ ಒತ್ತಾಯ ಪಡಿಸುತ್ತೀರಿ. ನೊದಲು ನಮ್ಮ ಹೊಟ್ಟೆಗೆ ಮುದ್ದೆ ಇಲ್ಲ. ಅವನ್ನು ನೊದಲು ನೋಡಿಕೊಳ್ಳಬೇಕು ನನ್ನ ಮಗನನ್ನು ಶಾಲೆಗೆ ಕಳಿಸೋಣವೆಂದರೆ ಸಾಲಕೊಟ್ಟು ಭಣಿ ಬಾಕಿ ಕಟ್ಟು. ಇಲ್ಲವೆ ನಿನ್ನ ಮಗನನ್ನು ಮಡಿಯಲು ಇಡೆಂದು ಕುತ್ತಿಗೆಯ ಮೇಲೆ ಕತ್ತಾರಿ ಇಟ್ಟುಕು. ನಿರುಪಯಾಗಿ ಅನನನ್ನ ಬಡ್ಡಿಯ ಆಳಾಗಿ ಮಡಿಸುತ್ತಿರುವೆನು ; ನಾವು ಪ್ರಾಣಕೊಟ್ಟಾದರೂ ನಾವ ಕಾಸಾಡಿಕೊಳ್ಳುವವರು ಇನ್ನು ನನ್ನ ಮಗಳು ಶಾಲೆಗೆ ಬಂದರೆ ನಾವೆಲ್ಲರೂ ಉಪವಾಸ ಸಾಯಬೇಕು. ಯಾಕಂದರೆ ನನ್ನ ಹೆಂಡತಿ ಕೂಲೀ ಹೋದರೆ ನಮಗೆ ಅನ್ನ ಅವಳು ಹೋಗದ ದಿನ ನೆಲ್ಲ ನಮಗೆ ಏಕಾದಸಿ. ನಮ್ಮಾಕೆ ಹೊಲಕ್ಕೆ ಹೋದರೆ ಈ ಹುಡುಗಿಯು ಸಣ್ಣ ಕೂಸನ್ನು ಆಡಿಸುವಳು ಪರಿಸ್ಥಿತಿ ಹೀಗಿವೆ ಮಕ್ಕಳನ್ನು ಶಾಲೆಗೆ ಕಳುಹಿಸಲು ನಮ್ಮಿಂದ ಶಕ್ಯವಿಲ್ಲವೆಂದು ಖಂಡಿತ ಹೇಳಿದನು.

ಇಂತಹ ಬಡ ಕುಟುಂಬಗಳು ಒಂದಲ್ಲ ಶೇಕಡಾ ೦ ರಷ್ಟು ಸಿಕ್ಕುತ್ತಿವೆ ಈ ರೀತಿ ಅದಿ ಕರ್ನಾಟಕರು ಶಾಲೆಗೆ ಬರುವುದು ಸಾಧ್ಯವಿಲ್ಲದಾಯಿತು. ಇನ್ಸ್ಪೆಕ್ಟರು ತಿಲಾ ಸಂದರ್ಶಿಸಿ ಅದಿ ಕರ್ನಾಟಕರು ಶಾಲೆಗೆ ಬಾರದಿದ್ದರೆ ಶಾಲೆಗೆ ಗ್ರಾಂಟು ಸಿಕ್ಕುವುದು ಶಕ್ಯವಿಲ್ಲವೆಂದರು. ಆವರ ಸ್ಥಿತಿಯನ್ನು ಅಧಿಕಾರಿಗಳಿಗೆ ತಿಳಿಸಿದೆನು. ಏನಾದರೂ ಆಗಲೀ ಅವರು ಉನ್ನತಿಗೆ ಬರದ್ದನ್ನು ನಿಮ್ಮ ಶಾಲೆಗೆ ಮೋಕ್ಷವಿಲ್ಲವೆಂದರು. ಮುಂದೆ ಏನು ಮಾಡಬೇಕು, ಯಾರಿಗೆ ನೊರೆ ಇಡಬೇಕೆನ್ನುವುದು ತೋಚವಾಯಿತು.

ಹೀಗಿರುತ್ತಿರಲು ಒಂದುದಿನ ರಾತ್ರಿ ಜಡಿಮಳೆ ಸುರಿದು ನಾನು ಕಟ್ಟಿಸಿದ ಪರ್ಣಶಾಲೆಯು ನೆಲಸಮವಾಯಿತು. ಗ್ರಾಮಸ್ಥರನ್ನು ಕೇಳಿದರೆ ಉಪಯೋಗವಾಗಲಿಲ್ಲ ಶಾಲೆಯು ಒಂದು ಮನೆಯ ಹೊರ ಜಗಲಮೇಲೆ ನಡೆಯಬೇಕಾಯಿತು. ಮನೆಯ ಯಜಮಾನಿ ಶಾಲಾ ಇನ್ಸ್‌ಪೆಕ್ಟರ್ ಬರುವ ಪೂರ್ವ, ಶಾಲೆಯ ಲ್ಲಿದ್ದ ಬೋರ್ಡು, ಪಟಗಳನ್ನು ಹೊರಕ್ಕೆ ಹಾಕಿದ್ದಳು ಗಂಡ ಹೆಂಡತಿಯರ ಜಗಳದ ಸೇಡು ನನ್ನ ಮೇಲೆ ತೀರಿಸಿಕೊಳ್ಳಲು ಬಂದಳು

'ಸ್ವಾಮಿ ನಮ್ಮ ಮನೆಯನ್ನು ಶಾಲೆಗಾಗಿ ಕಟ್ಟಿಸಿಲ್ಲ. ಮತ್ತೆಲ್ಲಿಯಾದರೂ ಹೋಗಿರಿ. ನಮ್ಮ ಮನೆಯನ್ನು ಕೊಡುವುದಿಲ್ಲ'ವೆಂದು ಕಟ್ಟಾಣಿ ಮಾಡಿದಳು ಆವಸ ನನ್ನ ಪ್ರಾಕ್ಟಿಕಲ್ ಪರೀಕ್ಷೆಯಾಗುವುದಿತ್ತು. ಗಂಡನು ಒಪ್ಪಿದರೂ ಆ ಹೆಂಗಸಿನ ಹೃದಯ ಕರಗಲಿಲ್ಲ ನನ್ನ ಪ್ರಾರ್ಥನೆಗೆಲ್ಲಾ ವ್ಯರ್ಥವಾದವು.

ನನಗಂತು ಆಗ ಆದ ದುಃಖವು ನನ್ನ ಜೀವಿತವಲ್ಲೇ ಆಗಿಲ್ಲವೆನಿಸುತ್ತದೆ. ನನ್ನ ಸಂಕಟ ಪ್ರಸಂಗವನ್ನು ನೋಡುತ್ತಿದ್ದ ಒಬ್ಬ ಪುಣ್ಯಾತ್ಮನು 'ನಮ್ಮ ಮನೆ ಬಿಟ್ಟು ಕೊಡುತ್ತೆವೆ ಬನ್ನಿರಿ'ಎಂದನು. ಧನ್ಯನಾದೆನು. ದಯಾಳುವಾದ ಇನ್ಸ್‌ಪೆಕ್ಟರರು ಪ್ರಾಕ್ಟಿಕಲ್ ಪರೀಕ್ಷೆ ಮುಗಿಸಿದರು.

ಇಷ್ಟು ತೊಂದರೆಗಳಿದಗಿದರೂ ನಾನು ಶಾಲೆಯನ್ನು ಬಿಡಲಿಲ್ಲ. ಹಳ್ಳಿಯ ಭವಿಷ್ಯ ಜನಾಂಗದ ಉನ್ನತಿಗೆ ಆ ಹಳ್ಳಿಯ ಉಪಾಧ್ಯಾಯನೇ ಮೂಲಕಾರಣನೆಂಬ ನುಚ್ಚು ನೈಯದಿಂದ ಕೆಲಸ ಮಾಡುತ್ತಿದ್ದೆನು.

ತನ್ಮಧ್ಯೆ, ಪ್ರತಿಯೊಂದು ಜಿಡ್ಡು ಸ್ಕೂಲು ಗಳಲ್ಲಿಯೂ ಏನು ತರಗತಿಗಳಿರುತ್ತವೆಯೋ ಅದು. ಹಾಗಿರದಿದ್ದರೆ ಗ್ರಾಂಟಿನಲ್ಲಿ ಕಡಿತವೆಂದು ಕಟ್ಟಾಣತಿ ಬಂತು.

ತತ್‌ಕ್ಷಣ ಏನನೆ ತರಗತಿ ಇಡಿವಿದ್ದರೆ ಶಾಲೆಯು ಅಪೂರ್ಣಶಾಲೆಯೆಂದು ಭಾವಿಸಲ್ಪಡಬಹುದೆಂದು ಉತ್ತರಬಂತು ಆಗ ನನ್ನ ಶಾಲಾ ಪರ್ಯಾವಧಿ ಪರೀಕ್ಷೆ ಇನ್ನೂ ಆಗಿರಲಿಲ್ಲ. ಏದನೇ ತರಗತಿಗೆ ಹುಡುಗರು ಸಿಕ್ಕುವುದು ಕಷ್ಟವಾಯಿತು. ಹಿಂದೆ ಓದಿದ ಹುಡುಗಳು ಆಗಲೆ ವ್ಯವಸಾಯಗಾರರಾಗಿದ್ದಾರೆ. ತಿರುಗಿ ಶಾಲೆಗೆ ಕಳುಹಿಸೆಂದರೆ ಅವರ ತಂದೆ ತಾಯಿಗಳು ತಮ್ಮ ವೃತ್ತಿಕೆಡುತ್ತದೆನ್ನುವರು.

ಸ್ವಯನಾಯಗಾರನಿಗೆ ಆಚಾಲವೃದ್ಧರೂ ಕೆಲಸಕ್ಕೆ ಬೇಕಾಗುತ್ತಾರೆ. ಪರಿಸ್ಥಿತಿ ಹೀಗಿರುವುದರಿಂದ ನಾಲ್ಕನೇ ತರಗತಿ ಪಾಸಾಗಿ ಬಿಟ್ಟಂಥ ವಿದ್ಯಾರ್ಥಿಗಳು ಮತ್ತು ಶಾಲೆಗೆ ಸೇರಿಸಲು ಹೊರಲ್ಲಿ ಒಂದು ಪಂಚಾಯತಿ ಮಾಡಿಸಿದೆನು. ಇನ್ಸ್‌ಪೆಕ್ಟರರು ಶಾಲಾ ಸಂದರ್ಶನಕ್ಕೆ ಒಂದಾಗ ಅವರೊಡನೆ ಹೇಳಿಸಿದೆನು. ಆಗ ಒಬ್ಬಿಬ್ಬರು ಒಪ್ಪಿದರು. ಆದರೂ ಪ್ರಪೋಷನೇಟ್ ಪರೀಕ್ಷೆಗೆಲ್ಲಿ ಒಂದನೆ ತರಗತಿವಿದ್ಯಾರ್ಥಿ 16, 5ನೇ ತರಗತಿಯು ಇಬ್ಬ ಹುಡುಗರಾದರು. ಆ ಎರಡು ಹುಡುಗರೂ ಪ್ರಮೋಷನ್ ಪರೀಕ್ಷೆಯಲ್ಲಿ ಪಾಸಾದರು.

ನಾನಿಷ್ಟ ಕರ್ತವ್ಯದಕ್ಷತೆಯಿಂದ ಕೆಲಸ ಮಾಡಿದರೂ ಶಾಲಾಭಿವೃದ್ಧಿಯಾಗದಿರಲು ಕಾರಣವೇನೆಂದು, ನನ್ನ ನಾಲ್ಕಾರು ಪರಿಚಯಸ್ಥರನ್ನು ವಿಚಾರಿಸಿದೆನು. ಗುಟ್ಟು ಬಯಲಿಗೆ ಬಿತ್ತು. ಆ ಊರಲ್ಲಿ ಯಾವ ಉಪಾಧ್ಯಾಯನೂ ಬಹಳ ದಿನಸ ಇರಲಿಲ್ಲ ಮತ್ತೆ ತಿಳಿದೆ, ಹೊಸ ಉಪಾಧ್ಯಾಯರುಗಳ್ಳಬರೆ. ಉಪಾಧ್ಯಾಯ ವೃತ್ತಿಯೊಂದಲ್ಲದೆ ವೈದ್ಯ, ವೈದೀಕ ಕಾರ್ಯಗಳನ್ನು ಅಂಥವರ ಊರಲ್ಲಿ ಯಾವ ಚಿಕ್ಕ ಪುಟ್ಟ ಬೇನೆಯು ಬಂದರೂ ಆ ಉಪಾಧ್ಯಾಯನೇ ಡಾಕ್ಟರ್, ಲಗ್ನ, ಮುಂಜಿಗಳಾದರೂ ಆ ಉಪಾಧ್ಯಾಯನೆ ಪುರೋಹಿತ ರೋಗಿಗೆ ಪಾಸಿಯಾಗಲಿ, ಸಾಯಲಿ. ಒಂದಿಷ್ಟು ಬೊಕ್ಕೊಳ್ಳಿ ಪೆಣಸು ಜೊತೆಯಾಡುವುದೂ ಕೊಡುವುದು. ಹೀಗೆ ಪಾಪ ನಾಗಾಡಿ ರೈತಾಯಿಗಳನ್ನು ಗಳಿಸಿದ್ದರು. ಮತ್ತು ಆ ಉಪಾಧ್ಯಾಯರು ಪ್ರಾತಃಕಾಲದಿಂದ ಸಾಯಂಕಾಲದವರೆಗೆ ಈಗಿನಂತೆ ಕಾಗಿ, ಗುಬ್ಬಿ ಎನ್ನದೆ ಬರೆ ಅಮರಕೋಶ, ಜೈಮಿನಿ, ಸೋಮೇಶ್ವರ ಶತಕ ಇಂತಹ ಶತಕಗಳನ್ನೇ ಕರುಡು ಪಾಠಮಾಡಿಸುತ್ತಿದ್ದರು. ಒಂಟಿಪೆಕ್ಕೆಗಳಂತಾ ನೀರು ಕುಡಿದ ಹಾಗೆ ಇತ್ತು. ನಿಮ್ಮ ಕೃಯವು ಈ ಊರಿನವರಿಗೆ ಸಾಬೀಳದು. ನಿಮ್ಮ ಕೃಯವು ನೀವು ಬೆಳೆಗೆ ಸುಯಾಗಿ ಕೆಲಸಮಾಡುತ್ತೀರಿ ಸಾಯಂಕಾಲವೆಲ್ಲ ನೀವೆ ಕೂತು ಹುಡುಗರಿಗೆ ಆಟಕಲಿಸುತ್ತೀರಿ. ಸಿಪಾಯಿಗಳಿಗೆ ಮಾಡಿಸಿದಂತೆ ಡ್ರಿಲ್ ಮಾಡಿಸುತ್ತೀರಿ. ಇವೆಲ್ಲವೂ ಅವರಿಗೆ ಅನಗತ್ಯವೆಂದು ಹೇಳಿಬಿಟ್ಟರು. ನಾನು ಓದಿದುದು ಸ್ಕೂಲ್ ಫೈನಲ್ ನನಗೆ ಶಾಲೆಯಲ್ಲಿ ವೈದೀಕವಾಗಲೀ, ವೈದ್ಯವಾಗಲಿ ಕಲಿಸಿರಲಿಲ್ಲ ಇನ್ನು ನಾನವರ ಮನಸ್ಸನ್ನು ತೃಪ್ತಿಪಡಿಸುವುದು ಹೇಗೆ ?

ವೇಹಾರೋಗ್ಯಕ್ಕಾಗಿ ಬಾಲಕರಿಗೆ ವ್ಯಾಯಾಮವನ್ನು ಕ್ರಮವಾಗಿ ಹೇಳಿಕೊಟ್ಟೇತೀರಬೇಕು.

ಇತ್ತ ಹಳ್ಳಿಗರನ್ನು ತೃಪ್ತಿಪಡಿಸೋಣವೆಂದರೆ ಇತ್ತ ಶಾಲಾಧಿಕಾರಿಗಳು ಶಿಲಬಸ್ಸು ಪೂರ್ತಿಯಾಗಿಲ್ಲವೆಂದು ರೇಗುವರು. ಶಾಲಾಧಿಕಾರಿಗಳ ಆಜ್ಞೆಯಂತೆ ನಡೆದರೆ ಗ್ರಾಮಸ್ಥರಿಗೆ ಸರಿಬೀಳದು. ಉಪಾಧ್ಯಾಯನನ್ನು ಉಪೇಕ್ಷಿಸುವರು.

ಈ ರೀತಿ ಕ್ರಮೇಣ ನನ್ನನ್ನು ಕೇಳುವವರೆ ಇಲ್ಲದ ಹಾಗಾಯಿತು. ಸರಸ್ವತೀ ಪೂಜಕನಾದ ಶಿಕ್ಷಕನಿಗೆ ಗೌರವವಿಲ್ಲದ ಹಾಗಾಯಿತು. ಕೇವಲ ಒಬ್ಬ ಅನಾಗರೀಕ ಮುಬ್ಬಾಳನೂ ಬಂದು ಎಳಕಯ್ಯ, ಶಾಲೆಯನ್ನು ಇಸ್ಕೊತ್ತಿಗೆ ಮುಚ್ಚುತ್ತಿ. ಹೀಗಾವರೆ ಮಕ್ಕಳು ಹೇಗೆ ವಿದ್ಯೆ ಕಲಿಯುತ್ತಾರೆ. ಎಂದು ಗದರಿಸುವನು.

ಇಷ್ಟಾದರೂ ಜೀವನಕ್ಕೆ ಬೇರೆ ಉಪಾಯವಿಲ್ಲದುದರಿಂದಲೂ ಹಳ್ಳಿಯ ಪುನರುದ್ಧಾರ ಮಾಡಬೇಕೆನ್ನುವ ಹೆಬ್ಬಯಕೆಯಿಂದಲೂ ಕಾಲಹಾಕುತ್ತಾ ಗ್ರಾಂಟನ್ನು ಹಾದಿ ನೋಡುತ್ತಿರಲು ಶಾಲೆಗೆ ಕಟ್ಟಡವಿಲ್ಲ ಹರಿಜನರ ಸಂಖೆ ಹೆಚ್ಚಿಲ್ಲ ವೈಟೇಜ್ ಕಮ್ಮಿ ಇಗೆ ವಿದ್ಯಾರ್ಥಿಯರೂ ಹೆಚ್ಚಿಲ್ಲವೆಂಬ ಬರುವ ಗ್ರಾಂಟಿನಲ್ಲಿ ಕಡಿತ ಬಂತು

ನನ್ನ ಹೃದಯದಮೇಲೆ ಕಲ್ಲುಬಿತ್ತು. ಭೂವ್ಯಾಕಾಶಗಳೂ ಒಂದಾದವು, ಊರಲ್ಲಿ ಒಂದು ಬಿಡಿಕಾಸು ಸಂಪಾದನೆ ಇಲ್ಲದಿದ್ದರೂ, ಪಾಸಿಸುವ ಮನೆಗೂ ಬಾಡಿಗೆ ಕೊಡುತ್ತಿದ್ದೆನು.

ಗ್ರಾಂಟು ಬಂದ ವಾರ್ತೆಯು ಜಂಗಡೀಕಾರನಿಗೆ ತಿಳಿಯಿತು. ಸಾಲವೆ ಶೂಲವು ಹೆಚ್ಚಾಯಿತು. ಬಂದ ಗ್ರಾಂಟು ಚಕ್ರನ್ನು ಜಂಗಡಿಯವನಿಗೆ ಕೊಟ್ಟು ಜನಿರೀನ್ಸ್ ತವಾಗಿ ರಾಜೆ ಮುಚ್ಚಿ ಕಾಲಿಗೆ ಬುದ್ಧಿ ಹೇಳಿದೆನು.

ಹಳ್ಳಿಯ ಜೀವನವು ಅತ್ಯಂತ ಪವಿತ್ರವಾದುದು, ಸುಖಕರವಾದುದು, ಪ್ರಪಂಚದ ವೃತ್ತಿಗಳಲ್ಲಿ ಉಪಾಧ್ಯಾಯ ವೃತ್ತಿಯು ಅತ್ಯಂತ ಶ್ರೇಷ್ಠವಾದುದು, ಲೋಕೋದ್ಧಾರಕ್ಕೂ ಆತ್ಮಕಲ್ಯಾಣಕ್ಕೂ ಇದೇ ಮೂಲವೃತ್ತಿ ಎನ್ನುವದು ಕನಸಾಯಿತು.

ನನ್ನ ಶೇನೆಯೆ ಹರನ ಶೇನೆಯೆಂದು ತಿಳಿದು ಸಮಾಜ ಸೇವೆ ಮಾಡಬೇಕೆನ್ನುವ ನನ್ನ ಹೆಬ್ಬಯಕೆಗಳು ಗಾಳಿಗೋಪುರವಾದುವು

ಸೊಂಡೂರ ಸಂಸ್ಥಾನದ ಪರಿಸ್ಥಿತಿ.

[ಸಂಸ್ಥಾನದನ]

ಬಳ್ಳಾರಿ ಜಿಲ್ಲೆಯಲ್ಲಿರುವ ಸಂಡೂರ ಸಂಸ್ಥಾನವು ಮಹಾರಾಷ್ಟ್ರದ ಅರಸುಮನೆತನದವರಿಂದ ಪಾಲಿಸಲ್ಪಡುತ್ತಿದೆ. ಇದರ ಬಹು ಭಾಗವು ಗುಡ್ಡಗಾಡು. ನೈಸರ್ಗಿಕ ರೂಪಭಾಯಿಯು ಅತಿರಮಣೀಯವಾಗಿ; ಪೋಷಿಸುವದು ಮ್ಯಾಂಗನೀಸ ಕಾರ್ಖಾನೆಯಿಂದ ಸಂಸ್ಥಾನಕ್ಕೆ ಉತ್ಪನ್ನವಿದೆ ರಾಜನತನದವರು ಮಹಾರಾಷ್ಟ್ರೀಯರಾದ ಕಾರಣ ಸಂಸ್ಥಾನಾಧಿಕಾರಿಗಳಲ್ಲಿ ನವಕರ ರಲ್ಲಿ ಮುಖ್ಯರು ಕೆಲವರು ಮರಾಠರಿದ್ದಾರೆ. ಇವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮರಾಠಿ ಶಿಕ್ಷಣಕ್ಕೂ ಎರ್ಪಾಟಿದೆ ಹೈಸ್ಕೂಲು ಸಾಮಾನ್ಯವಶೇಷವಾಗಿ ಹೋಯಿತು.

ಈ ಸಣ್ಣ ಸಂಸ್ಥಾನದ ಪರಹದ್ದಿನಲ್ಲಿ ದಕ್ಷಿಣ ಹಿಂದೂದೇಶದ ಸುಪ್ರಸಿದ್ಧ ಕೊಮಾರಸ್ವಾಮಿ (ಕಾರ್ತಿಕೇಯ) ದೇವಾಲಯವುಂಟು. ರಾಮನಮಲೆ (ಈಗ ರಾಮಘಡೆ ಎಂದು ಕರೆಯುತ್ತಾರೆ) ಎಂಬ ಬಿಸಿಲುಕಾಲದ ವಾಸಸ್ಥಾನವಿದೆ ಇವೆರಡರಿಂದಲೂ ಸರಕಾರಕ್ಕೆ ಉತ್ಪನ್ನವುಂಟು. ಅನೇಕ ಸಂಸ್ಥಾನಗಳಲ್ಲಿ ಕತ್ತಲೆಯು ಕವಿಸಿರುವಂತೆ, ಈ ಸಂಸ್ಥಾನದ ಆದಾಯ ವ್ಯಯಗಳೆಷ್ಟೆಂಬುದರ ಬಗ್ಗೆ ಪ್ರಜಾವರ್ಗದವರು ಸ್ಪಷ್ಟರೂ ಹಾಗೂ ನರ್ತಕರೂ ಅಂಧಕಾರದಲ್ಲಿದ್ದಾರೆ. ಬ್ರಿಟೀಶ ಹಿಂದುಸ್ತಾನಕ್ಕಿಂತ ಇಲ್ಲಿಯ ಸ್ಥಿತರು ಭೂಕಂದಾಯವನ್ನು 3-4 ರಷ್ಟು ಹೆಚ್ಚಿಗೆ ಕೊಡಬೇಕಲ್ಲದೆ, ಮತ್ತಿತರ ಕರಗಳನ್ನು ಕೊಡಬೇಕು. ಇಲ್ಲಿಯ ಜಮೀನುಗಳಿಗೂ ಮತ್ತು ಅಸುಸಾಸು ಬ್ರಿಟಿಶರ ಇಲಾಖಾ ಭೂಮಿಗಳಿಗೂ ಸಾರವಂತದಲ್ಲಿ ಯಾವ ವ್ಯತ್ಯಾಸವಿಲ್ಲದೆ ಇರೋಣದರಿಂದಲೂ ಅಲ್ಲಿಯ ಕ್ಕಿಂತಲೂ ಇಲ್ಲಿ ವ್ಯವಸಾಯದ ಖರ್ಚುಗಳು ವಿಶೇಷಬರೋಣದರಿಂದಲೂ, ಸಂಸ್ಥಾನ ಸರಹದ್ದಿಗೆ ಹತ್ತಿದ ಬ್ರಿಟಿಶ ಇಲಾಖೆ ಗ್ರಾಮಗಳ ಭೂಕಂದಾಯವು ದರಗಳಿಗೆ ಸಮವಾಗುವಂತೆ ಹಾಗು ಉತ್ತಮ ತರಗತಿ ಜಮೀನುಗಳಿಗೆ ಸಹ ಎಕರೆ ಒಂದಕ್ಕೆ ರು ೫-೦-೦ ಮೀರದಂತೆಮಾಡಿ ಶ್ರೀಮಂತರಾಜಾ ಸಾಹೇಬರು ಪ್ರಜೆಗಳ ಸಂಕಷ್ಟವನ್ನು ದೂರಮಾಡಿ ಕೀರ್ತಿಯನ್ನು ಪಡೆಯುತ್ತಾರೆಂದು ಆಶಿಸುತ್ತೇವೆ.

ಎಲ್ಲ ಸಂಸ್ಥಾನಗಳಿಗಿಂತಲೂ ಮುಂಚಿತವಾಗಿ ಈ ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆ ಶಾಸನವನ್ನು ಹೊರಡಿಸಿ ಕೀರ್ತಿಯನ್ನು ಪಡೆದಂಶೆ ಇನ್ನಿತರ ಪ್ರಜಾ ಉನ್ನಯುಕ್ತ ಕಾರ್ಯಗಳು ನಡೆಯಲಿಲ್ಲ. ಮುಖ್ಯವಾದ ರಸ್ತೆಯೆಂದರೆ, ಎತ್ತಿನ ಹಟ್ಟಿ (ತಾರಾನಗರಿ)ಯಿಂದ ಕಣಿವೆಹಳ್ಳಿಗೆ (ಯಸವಂತಪುರ) ಇದಕ್ಕೆ ಬ್ರಿಟಿಶ ಜಿಲ್ಲಾ ಬೋರ್ಡಿನವರೂಕೂಡ ರಿಪೇರಿಗಾಗಿ ಹಣ ನದಗಿಸುವರು. ಇಲ್ಲಿಯ ಭೂಮಿಯು ಅಷ್ಟು ಫಲವತ್ತಾದುದಲ್ಲ. ಸ್ಥಿತರು ಘೋರ ಬಡತನದಲ್ಲಿರುವರು. ವರ್ಷದ ಬಹುಭಾಗದಲ್ಲಿ ಇವರಿಗೆ ಬೇರೊಂದು ಉದ್ಯೋಗವಿಲ್ಲ. ಸರಕಾರದವರು ಹಳ್ಳಿಗರಿಗಾಗಿ ತಾವು ಏನು ಉಪಯುಕ್ತ ಕೆಲಸಗಳನ್ನು ಮಾಡಿರುವರೆಂಬುದನ್ನು ವ್ಯಕ್ತಪಡಿಸಿದರೆ ಪರಸ್ಥಾತಗಳವರಿಗೆ ಇಲ್ಲಿಯ ಪರಿಸ್ಥಿತಿಯು ಜನ್ಮಾಗಿ ವ್ಯಕ್ತವಾಗುತ್ತದೆ. ಕ್ಷಾಮದ ಕಷ್ಟ ನಷ್ಟಗಳನ್ನು ಅನುಭವಿಸಬೇಕು ಇಷ್ಟೇ ರೈತನ ಜೀವನ

ಕೆಲವು ಸೊಂಡೂರಿನ ಮುಖಂಡರು ಪ್ರಜೆಗಳ ಪರವಾಗಿ ಹೋರಾಟ ಮಾಡಿ ಸಿದ್ದಾಗ ಅವರನ್ನು ಜೈಲಿಗೆಮಾಡಿ ಪ್ರಜೆಗಳಿಗೆ ಯಾವ ಅಂಶವೂ ತಿಳಿಯದಂತೆಮಾಡಿ ಕೊನೆಯಲ್ಲಿ ನಮ್ಮದು ತಪಸ್ಸಾಯಿತ ಎಂಬುವ ಕನಿಕರ ಪರಿಸ್ಥಿತಿಯನ್ನು ತಂದರು. ಆಗಿನಿಂದಲೂ ಪ್ರಜೆಗಳಿಗೆ ಮುಖಂಡರೆಂಬುವರಿಲ್ಲ ಪ್ರಜೆಗಳಿಗೆ ನ್ಯಾಯ ಸಂಬಂಧಿ ಬೇಡಿಕೆಗಳು ಪ್ರಕಾಶಕ್ಕೆ ಬರುವದಿಲ್ಲ.

ಘಟನಾಸಮಿತಿ:— ಸರಕಾರದವರು ಘಟನಾಸಮಿತಿಗೆ ನೇಮಿಸಿದ ಸದಸ್ಯರುಗಳಲ್ಲಿ ವಿಶೇಷವೆಂದು ಈಬಳಗಾಗಿ ಸಂಸ್ಥಾನ ಪ್ರಜಾಮಂಡಳದಲ್ಲಿ ಮಂಡಿಸಿದ ಜವಾಬದಾರಿ ಸರಕಾರದ ಕೊತ್ತುವಳಿ ವಿಷಯದಲ್ಲಿ ನಿರುದ್ಯೋಗಿಗಳೇ ಜರೂರಣದರಿಂದ ಈ ಸಮಿತಿಯಿಂದ ಪ್ರಜೆರಿಗೆ ಯೋಗ್ಯಸುಧಾರಣೆಗಳು ದೊರೆಯುತ್ತವೆ ಎಂಬ ನಂಬಿಗೆ ಇಲ್ಲ.

ಪ್ರಜಾಮಂಡಲ ಮತ್ತು ದರಬಾರು:- ಸರಕಾರದವರು 1931 ನೇ ಇಸ್ವಿಯ 3ನೇ ಕಾಯದೆಯ ಪ್ರಕಾರ ಸ್ಥಾಪಿಸಲ್ಪಟ್ಟ [ಸ್ಟೇಟ್‌ಕೌನ್ಸಿಲು] ಪ್ರಜಾಮಂಡಲಕ್ಕೆ ಯೋಗ್ಯವಾದ ಅಧಿಕಾರಿಗಳು ಯಾವುದಿಲ್ಲ ಸದರಿ ಮಂಡಲ ಸರಕಾರದವರು ನಿರ್ಧರಿಸಿ ಪಕೆಲವೇ ವಿಷಯಗಳಲ್ಲಿ ಮಟ್ಟಿಗೆ ಶಿಫಾರಸು ಮಾಡಲು ಮಾತ್ರ ಉಪದೇಶಾತ್ಮಕ ಸಂಘವಾಗಿ ಇರುತ್ತದೆ. ಮತ್ತು ಪ್ರಜಾಮಂಡಲವು ತರಾವುಮಾಡಿದ, ತೀರ್ಮಾನಗಳು ಮಸೂದೆಗಳು ಬದ್ಧಕಾರಕವಾಗಿರದೆ ಅವಕ್ಕೆ ಯೋಗ್ಯಬೆಲೆ ಇರುವದಿಲ್ಲ. 1939ನೇ ಇಸ್ವಿ ಫಿಬ್ರವರಿ ತಿಂಗಳು 4ನೇ ತಾರೀಖಿನ ರಾಜಶಾಸನದ ಪ್ರಕಾರ ಸ್ಥಾಪಿಸಲ್ಪಟ್ಟ ದರಬಾರವು ಸರಕಾರದವರಿಂದ ನೇಮಿಸಲ್ಪಟ್ಟ ಜನರಿಂದ ತುಂಬಿದ್ದಾಗಿ ಇರುವದರಿಂದಲೂ ಕಾಯಿದೆಗಳನ್ನು ಸೂಚಿಸುವದು, ಪ್ರಜಾಮಂಡಲದಿಂದ ಬಂದ ಶಿಫಾರಸುಗಳನ್ನು ತಿದ್ದುಪಡಿಮಾಡುವದು, ಪ್ರಜಾಮಂಡಲದ ತರಾವುಗಳು ದರಬಾರದಲ್ಲಿ ಬಾರದಂತಿರಹಾ ಶ್ರೀಮಂತರಾಜಾಸಾಹೇಬರವರ ಒಪ್ಪಿಗೆಗೆ ಕಳಿಸಕೂಡದೆಂಬ ನಿಯಮವು ಇತ್ಯಾದಿ ಅಧಿಕಾರಗಳನ್ನು ದರಬಾರಕ್ಕೆ ಇಟ್ಟಿರುವದು ಪ್ರಜಾಪತ್ಯಾತ್ಮಕ ರಾಜ್ಯತತ್ವಕ್ಕೆ ವಿರುದ್ಧವಾಗಿವೆ. ಈ ಕಾರಣಗಳಿಂದ ಈಗರಚಿಸಿರುವ ರಾಜ್ಯಘಟನೆಯು ಪ್ರಜರು ಸಮ್ಮತಿಸುವಂತೆ ಇಲ್ಲ ಪ್ರಜರಲ್ಲಿ ವಿಶ್ವಾಸವಿಟ್ಟು ತಯಾರಿಸಿದ್ದಲ್ಲವೆಂದು ಸ್ಪಷ್ಟವಾಗುತ್ತದೆ. "ದರಬಾರವು" ಅನಾವಶ್ಯಕ. ಸಂಸ್ಥಾನಸನ್ನುದು. ಅಲ್ಲದೆ ಮೇಲ್ಮನೆಯು ರಾಷ್ಟ್ರೀಯತತ್ವಕ್ಕೆ ವಿರುದ್ಧವಾಗಿದೆ. ಪ್ರಜಾರಾಜ್ಯಭಾರದ ಸೂತ್ರಗಳಿಗೆ ಕುಠಾರ ಪ್ರಾಯವಾಗಿವೆ. ಈಕಾರಣ ದರಬಾರ (ಮೇಲ್ಮನೆ) ದ ಸ್ಥಾಪನೆಯನ್ನು ಕನಸು, ಮನಸುಗಳಲ್ಲಿಯೂ ಮಾಡಬಾರದು.

ಶ್ರೀಮಂತ ರಾಜಾ ಸಾಹೇಬರು 1940ನೇ ಫೆಬ್ರವರಿ ತಿಂಗಳಲ್ಲಿ ಆದ ತಮ್ಮ ವಿವಾಹ ಜರಮನೆಯ ಪ್ರವೇಶಾರಂಭಕಾಲಕ್ಕೆ ರೈತರನ್ನು ಕುರಿತು ಭಾಷಣಮಾಡಿದರು, ತಮ್ಮ ಸಂಸ್ಥಾನದಲ್ಲಿ ಭುಲ್ಲಾ ಜಾತಿಯ ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಏರ್ಪಾಡು, ಹಾಗು ಭೂಮಿಯ ಕಂದಾಯದಲ್ಲಿ ರಿಯಾಯಿತಿ ಕೊಡುವ ಪ್ರಕಾರ ಕಮ್ಮಿಸ್ಯಾಡಲು ವಚನವಿತ್ತಿರುವರು.

ಸಂಸ್ಥಾನಕ್ಕೆ ಆದಾಯವೆಷ್ಟು:- [೧] ಭೂಕಂದಾಯದಿಂದ (೨) ಇತರ ತೆರಿಗೆಗಳಿಂದ (೩) ಮೋಟಾರಕರದಿಂದ [೪] ಹೆಂಡಸರಾಯಿ ಗಾಂಜಾಗಳಿಂದ (೫) ಇತರ ಬಾಬುಗಳಿಂದ (೬) ಶ್ರೀ ಕೊಮಾರಸ್ವಾಮಿ ದೇವಾಲಯದಿಂದ [೭ ಮ್ಯಾಂಗನೀಸ ಕಾರ್ಖಾನೆಯಿಂದ ಎಷ್ಟು ಆದಾಯ ನೆಂಬುದನ್ನು ಎಲ್ಲಾದರೂ ಪ್ರಕಟಿಸಿರುವರೇನು?

ಸಂಸ್ಥಾನದ ಖರ್ಚುಗಳು:- ಸಂಬಳಕ್ಕಾಗಿ ಎಷ್ಟು ವ್ಯಯವಾಗುತ್ತದೆ? ವಿವರಣೆ:- ರಾಜರ ತಂದೆಯವರಿಗೆ ಇತರ ಇಲಾಖೆಯವರಿಗೆ ಗ್ರಾಮೋದ್ಧಾರಕ್ಕಾಗಿ ಎಷ್ಟು ವ್ಯಯ ಮಾಡುವರು? ಪ್ರಜೋಪಯೋಗಿ ಇತರ ಯಾವ ಕಾರ್ಯಗಳಿಗೆ ಎಷ್ಟು ವ್ಯಯ? ಹಾಗೂ ರಾಜರು ತಮ್ಮ ಕುಟುಂಬಕ್ಕಾಗಿ ಎಷ್ಟು ವಾರ್ಷಿಕ ಖರ್ಚನ್ನು ತೆಗೆದುಕೊಳ್ಳುವರು? ಈ ಯಾವತ್ತು ಅಂಕೆಗಳನ್ನು ಸೊಂಡೂರು ಪ್ರಜರ ಆನಗಾಹನೆಗೆ ತಂದು ಪ್ರಜಾ ಜನರ ಅಂಧಕಾರವನ್ನು ಹೋಗಲಾಡಿಸಿ, ಪ್ರಜಾ ದಯಾಳುಗಳಾದ ಶ್ರೀಮಂತ ಯಶವಂತರಾವ ರಾಜಾಸಾಹೇಬರವರು ಕೀರ್ತಿಯನ್ನು ಪಡೆಯುವರೆಂದು ಆಸಿಸುವಾ.

ಖಾದಿಯನ್ನು ಉಡಲಾರದ ಕೋಮಲೆಯರು

ಗಂಡಂದಿರು ಅವರನ್ನು ಹೇಗೆ ದಾರಿಗೆ ತರಬೇಕು.

ಖಾದಿ ಎಂದರೆ ಒರಟು ಬಟ್ಟೆ ಅದನ್ನು ಉಡಲಾಗುವುದಿಲ್ಲ ಎಂದು ಹೇಳುವ ಕೋಮಲೆಯರು ಎಷ್ಟು ಜನರಿಲ್ಲ? ಇಂತಹ ಮೃದುಶರೀರೆಯೋರ್ವಳನ್ನು ಮದುವೆಯಾಗಿ, ಪತ್ನಿಯನ್ನು ಖಾದಿ ಧಾರಿಣಿಯಾಗಿ ಮಾಡುವ ಪ್ರಯತ್ನದಲ್ಲಿ ವಿಫಲನಾಗಿದ್ದ ತರುಣನೊಬ್ಬನು ಗಾಂಧಿಜಿಯವರಿಗೆ ಈ ರೀತಿ ಬರೆದಿದ್ದಾನೆ. 'ಕಳೆದೆರಡು ವರ್ಷಗಳಿಂದ ನಾನು ಶುದ್ಧ ಖಾದಿ ಧರಿಸುತ್ತೆನೆ. ಅವಕಾಶ ಸಿಕ್ಕಾಗ ನೂಲುತ್ತೇನೆ. ಅವರೆ ನನ್ನ ಕೆಂಡತಿ ಖಾದಿ ಧರಿಸಲು ನಿರಾಕರಿಸುತ್ತಾಳೆ. ಅದು ವರಟುಬಟ್ಟೆ ಎಂದು ಅವಳ ಆಕ್ಷೇಪಣೆ. ಖಾದಿ ಉಪಯೋಗಿಸುವಂತೆ ನಾನು ಅವಳನ್ನು ನಿರ್ಭಂಧಪಡಿಸಬಹುದೇ? ನನ್ನ ಮತ್ತು ಅವಳ ಸ್ವಭಾವವು ಹೊಂದುವದಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸುವದು ಅಗತ್ಯ.

ಪಾಪ, ತರುಣನ ದುಃಖದಲ್ಲಿ ಸಹಾನುಭೂತಿಯಿಂದ ಗಾಂಧೀಜಿಯವರು ಹೀಗೆ ಬರೆದಿದ್ದಾರೆ. 'ದಾಂಪತ್ಯದಲ್ಲಿ ನೀವು ಅನುಭವಿಸುತ್ತಿರುವ ತೊಂದರೆಯು ನಮ್ಮಲ್ಲಿ ಸಾಮಾನ್ಯವಾದದ್ದು. ಪತಿಯು ಪತ್ನಿಗಿಂತ ವಿದ್ಯಾವಂತನು, ಶಕ್ತಿವಂತನೂ ಆದ್ದರಿಂದ ಪತ್ನಿಯ ವಿಷಯದಲ್ಲಿ ಗುರುವಿನಂತೆ ವರ್ತಿಸಬೇಕೆಂದು. ನಾನು ಹಿಂದೆ ಅನೇಕ ಸಾರಿ ಹೇಳಿದ್ದೇನೆ. ನಿನಗೂ ನಿನ್ನ ಪತ್ನಿಗೂ ಹೊಂದಿಕೆ ಇಲ್ಲದಿದ್ದರೂ ನೀನು ಅದನ್ನು ಸಹಿಸಿಕೊಂಡು ಒತ್ತಾಯವಿಲ್ಲದೆ ಪ್ರೀತಿಯಿಂದ ಅಳಲು ಪ್ರಯತ್ನಿಸಬೇಕು. ಅಂದ ಮೇಲೆ ಖಾದಿ ಧರಿಸಲು ಒತ್ತಾಯಪಡಿಸಲಾಗದೆಂದು ಹೇಳಿದಂತೆ ಆಯಿತಲ್ಲವೇ? ಪ್ರೀತಿಯಿಂದ, ಳಿಳ್ಕೀ ಮಾತುಗಳಿಂದ ಆಕೆ ಖಾದಿಪ್ರೇಮಿಯಾಗುವಂತೆ ಮಾಡುವದು ಸಾಧ್ಯ. ನನ್ನ ಪತ್ನಿಯು ನನಗೆ ಸೇರಿದವಳು ಎಂಬ ಸ್ವಾಮ್ಯಭಾವನೆಮಾತ್ರ ಬೇಡ. ನೀನು ಅವಳ ಒಡೆಯನಲ್ಲ ಅವಳು ನಿನ್ನ ದಾಸಿಯಲ್ಲ. ಶಾಸ್ತ್ರದ ದೃಷ್ಟಿಯಿಂದ ನಿನ್ನ ಪತ್ನಿಯು ನಿನ್ನ ಅರ್ಧಾಂಗಿ; ಪಾಶ್ಚಾತ್ಯರೂಢಿಯಂತೆ ನಿನ್ನ ಉತ್ತಮಾರ್ಧ ಸ್ವರೂಪಳು. ನೀನು ನಿನ್ನ ಪತ್ನಿಯನ್ನು ಅದೇ ರೀತಿ ನಡೆಸಿಕೋ. ತದನು ಗುಣವಾದ ಫಲವು ನಿನಗೆ ದೊರೆಯುವದು.

Rayalaseema Bank., Limited.

Registered Office:-

Brahmins Street, **BELLARY.**

ರಾಯಲಸೀಮ ಬ್ಯಾಂಕು., ಲಿಮಿಟೆಡ್.

[ಇಂಡಿಯಾ ಸರ್ಕಾರದ ಕಂಪನೀ ಶಾಸನಗಳನ್ನನುಸರಿಸಿ ಸ್ಥಾಪಿಸಲ್ಪಟ್ಟಿದೆ.]

ರಿಜಿಸ್ಟರ್ಡ್ ಕಾರ್ಯಾಲಯ:- ಬ್ರಾಹ್ಮಣರ ಬೀದಿ, **ಬಳ್ಳಾರಿ.**

ಈ ಬ್ಯಾಂಕು ಮುಖ್ಯವಾಗಿ ರಾಯರಸೀಮೆಯ ಜಿಲ್ಲೆಗಳಾದ ಬಳ್ಳಾರಿ, ಕಡಪಾ, ಕರ್ನೂಲು, ಅನಂತಪುರ, ಚಿತ್ತೂರ ಜಿಲ್ಲೆಗಳಲ್ಲಿನ ಕೃಷಿಕರ ಮತ್ತು ವ್ಯಾಪಾರಿಗಳ ಉದ್ಯೋಗದ ಉನ್ನತಿಗೆ ಸಹಾಯ ಮಾಡುವ ಸದುದ್ದೇಶದಿಂದ ಸ್ಥಾಪಿಸಲಾಗಿದೆ.

ಬ್ಯಾಂಕಿನ ಅಧಿಕೃತ ಮೊತ್ತ (Authorised Capital) 25,00,000.

ಈ ಮೊತ್ತವು ಕೆಳಗೆ ಕಾಣಿಸಿದ ಪ್ರಕಾರ ವಿಭಜಿಸಲ್ಪಟ್ಟಿದೆ.

20 ಸಾವಿರ 'ಎ' ಷೇರುಗಳು, ಷೇರು 1ಕ್ಕೆ 100 ಪ್ರಕಾರ ರೂ. 20,00,000.

50 ಸಾವಿರ 'ಬಿ' ಷೇರುಗಳು, ಷೇರು 1ಕ್ಕೆ 10 ಪ್ರಕಾರ ರೂ. 5,00,000.

ಹರಾಜು: ಪ್ರಸ್ತುತವೆಲ್ಲಿ ಡೈರೆಕ್ಟರರು 'ಎ' ಷೇರುಗಳನ್ನು ಮಾತ್ರವೇ ಕೊಡುವರು. ಷೇರ್ ದರಖಾಸ್ತು ಫಾರಂಗಳನ್ನು ಕೋರುವವರು ಬ್ಯಾಂಕಿನ ರಿಜಿಸ್ಟರ್ಡ್ ಕಾರ್ಯಾಲಯಕ್ಕೆ ದಯವಿಟ್ಟು ಬರೆಯಬೇಕು. 'ಎ' ಷೇರಿಗೆ 25/- ಪ್ರಕಾರ ಎರಡು ಕಂತುಗಳಲ್ಲಿ 50/- ಕೊಡಬೇಕು. ಬಾಕಿ 50/- ಈಗಲೇ ಕೋರುವುದಿಲ್ಲ. ಬ್ಯಾಂಕಿನ ಪೂರ್ತಿ ವಿವರಗಳನ್ನುಳ್ಳ 'ಪ್ರಾಸ್ಪೆಕ್ಟಸ್' ಮತ್ತು ಷೇರಿನ ದರಖಾಸ್ತು ಫಾರಂಗಳಿಗಾಗಿ ಬ್ಯಾಂಕಿನ ರಿಜಿಸ್ಟರ್ಡ್ ಕಾರ್ಯಾಲಕ್ಕೆ ಬರೆಯಿರಿ.

ಪಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ. ಹೆಚ್. ಶೀತಾರಾಮರೆಡ್ಡಿ, ಬಿ. ಎ. ಬಿ. ಎಲ್. [ಎಂ. ಎಲ್. ಎ.] ಡೈರೆಕ್ಟರುಗಳ ಬೋರ್ಡ್ ಅಧ್ಯಕ್ಷರು.

★ ಮೂವತ್ತೈದು ವರ್ಷಗಳ ವಿಶ್ವಾಸಾರ್ಹವಾದ ಅನುಭವ ★

ಈ ದೀರ್ಘಕಾಲದಲ್ಲಿ **ನ್ಯಾಷನಲ್** ಸಂಸ್ಥೆಯು ನಂಬಿಕೆಗೆ ಕಾರಣವಾದ ಭರವಸೆಯನ್ನಿತ್ತಿದೆ. ಆದರ ಬೆಳವಣಿಗೆಯೂ, ಕ್ಷೇತ್ರವಿಸ್ತಾರವೂ ಸಂಸ್ಥೆಯ ಎಚ್ಚರಿಕೆ ನುತ್ತು ದೂರದರ್ಶಿತ್ವವನ್ನವಲಂಬಿಸಿವೆ.

ಕ್ರಮಶಃ ಅಭಿವೃದ್ಧಿಯನ್ನು ಹೊಂದುವುದೇ **ನ್ಯಾಷನಲ್** ಸಂಸ್ಥೆಯ ತಳಗಲ್ಲಾಗಿದೆ. ಎಚ್ಚರಿಕೆಯಿಂದ ಮಿತ ವ್ಯಯವನ್ನಾಚರಣೆಯಲ್ಲಿ ತಂದು ಶೀಘ್ರವಾಗಿ ತನ್ನ ಹಕ್ಕಿಗೆ ಸಂಬಂಧಿಸಿದ ಹಣವನ್ನು ಪಾವ್ತಿಮಾಡುವುದರ ಮೂಲಕ ತನ್ನ ಏಜೆಂಟರಲ್ಲಿ ವಿಶ್ವಾಸವನ್ನೂ, ಸಾನುಭೂತಿಯನ್ನೂ ಉತ್ಪತ್ತಿ ಮಾಡುವುದೇ ಈ ಸಂಸ್ಥೆಯ ಕಾರ್ಯಕ್ರಮವಾಗಿದೆ.

ಒಟ್ಟು ಆಸ್ತಿ
ರೂ. 3,40,00,000

ಇಲ್ಲಿಯವರೆಗೆ ಹಕ್ಕಿನ ಹಣದ ಪಾವತಿ
ರೂ. 2,20,00,000

ನ್ಯಾಷನಲ್ ಇನ್‌ಶೂರೆನ್ಸು ಕಂಪೆನಿ ಲಿಮಿಟೆಡ್.

[ಮುಖ್ಯ ಕಛೇರಿ— ಕಲ್ಕತ್ತ]

ಶಾಖಾಕಾರ್ಯಾಲಯ— ನ್ಯಾಷನಲ್ ಇನ್‌ಶೂರೆನ್ಸು ಬಿಲ್ಡಿಂಗ್, ಎಸ್ಪ್ಲನೇಡ್ ಮಿದ್ರಾಸು.

ಆರ್ಬನೈಜರ್
ಸತ್ಯನಾರಾಯಣ ಪೇಟ್,
ಬಳ್ಳಾರಿ.

ಉಪಶಾಖೆ (Sub-Office)
ದೆ. ವಾಂಗ ಬ್ಯಾಂಕು ಬಿಲ್ಡಿಂಗ್,
ಕೆಂಪೆಗೌಡ ರೋಡ್-ಬೆಂಗಳೂರು ಸಿಟಿ

ಪ್ರಪಂಚದ ಭಿನ್ನ ಭಿನ್ನ ದೇಶಗಳಲ್ಲಿ ಸಿನೆಮಾ ಗೃಹಗಳ ಸಂಖ್ಯೆ.

ಕಳೆದ ವರ್ಷ (1939)ರಲ್ಲಿ ಪ್ರಪಂಚದ ಭಿನ್ನ ಭಿನ್ನ ದೇಶಗಳಲ್ಲಿ 97,344 ಸಿನೆಮಾ ಗೃಹಗಳಿದ್ದವು. ಯೂರೋಪ್ ಖಂಡದಲ್ಲೇ 66,876 ಅಮೆರಿಕಾದಲ್ಲಿ 22,456 ಆಫ್ರಿಕಾ ಮತ್ತು ಪೂರ್ವ ದೇಶಗಳಲ್ಲಿ 676, ದೂರದ ಪೂರ್ವದಲ್ಲಿ ಅಂದರೆ (ಜಪಾನ್) 5,244, ನಮ್ಮ ಭರತ ಖಂಡದಲ್ಲಿ (ಹಿಂದೂಸ್ತಾನ) 996 ಮಾತ್ರ ಗೃಹಗಳಿವೆ. ನಮ್ಮ ದೇಶದ ಐದರಲ್ಲೊಂದು ಭಾಗದ ಜರ್ಮನಿಯಲ್ಲಿ 5302, ಮತ್ತು ನಮ್ಮ ದೇಶದ ಹತ್ತರಲ್ಲೊಂದು ಭಾಗದ ಇಂಗ್ಲೆಂಡಿನಲ್ಲಿ 5150 ಸಿನೆಮಾಗೃಹಗಳಿವೆ.

ಹೊಸಪೇಟೆ

ಕೋ-ಆಪರೇಟಿವ್ ಶಿಂಟ್ರಲ್ ಬ್ಯಾಂಕ್ ವಾರ್ಷಿಕಸಭೆ.

ಈ ಸಭೆಯು ದಿವ್ಯಜ್ಞಾನಮಂದಿರದಲ್ಲಿ 7 ನೇಯ ತಾ. ಮಧ್ಯಾಹ್ನ ಶ್ರೀ ತಾಂಡುನೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ವಾರ್ಷಿಕ ಆಡಳಿತದ ವರದಿಯನ್ನು ಓದಿ ತಿಳಿಸಲಾಯಿತು. ನ್ಯಕ್ತಿಶಃ ಷೇರ್-ಹೋಲ್ಡರ್‌ರವರೂ, ಚುನಾಯಿತರಾದ ಪ್ರತಿನಿಧಿಗಳೂಸೇರಿ ಸುಮಾರು 150 ಜನರು ಹಾಜರಿದ್ದರು. ಪೂರ್ವತಾಲೂಕುಗಳಿಗಾಗಿ 2 ಜನ ಪಶ್ಚಿಮತಾಲೂಕುಗಳಿಗೆ 3 ಒಟ್ಟಿಗೆ 5 ಜನರು ಡೈರೆಕ್ಟರ್ಸ್‌ಆಗಿ ಆರಿಸಲ್ಪಟ್ಟರು ಇವರಲ್ಲದೆ ತಾಲೂಕಿಗೊಬ್ಬರಂತೆ 9 ತಾಲೂಕುಗಳಿಗೆ 9 ಜನ ಡೈರೆಕ್ಟರ್ಸ್ ಈಗಾಗಲೇ ಚುನಾಯಿತರಾಗಿರುವರು.

ತಾಲೂಕು ಪ್ರತಿನಿಧಿಗಳು:—

ಆದವಾನಿ	ಜ. ಶಾಲಿಸಾಹೇಬ್
ಬಳ್ಳಾರಿ	ಶ್ರೀ ಶಿವಾಚನ್ನಬಸಪ್ಪ
ಶಿರುಗುಪ್ಪೆ	,, ನಿಟ್ಟೂರು ಸಣ್ಣನಗೌಡ
ಹರಪನಹಳ್ಳಿ	,, ಅ. ನಾರಾಯಣಭಟ್ಟ
ಹೊಸಪೇಟೆ	,, ಡಾ. ನಾಗನಗೌಡ
ಹಡಗಲಿ	,, ಕೊಟ್ರಯ್ಯ
ಆಲೂರು	,, ಲೋಕಿರೆಡ್ಡಿ
ಕೂಡ್ಲಿಗಿ	,, ಚನ್ನಬಸಪ್ಪಯ್ಯ

ಸಭೆಯಲ್ಲಿ ಆರಿಸಲ್ಪಟ್ಟವರು

ಪೂರ್ವತಾಲೂಕುಗಳಿಗೆ

1 ಶ್ರೀ ಕುಡುತಿನಿ ರಾಮರಾವ್
2 ,, ಸೊಂತಾ ಶೀತಾರಾಮಶೆಟ್ಟಿ

ಪಶ್ಚಿಮ ತಾಲೂಕುಗಳಿಗೆ

1 ಶ್ರೀ ಯಂ, ರಾಮರಾವು
2 ,, ನಿಂ, ಚನ್ನವೀರಯ್ಯ
3 ,, ಎ. ಡಿ. ತಾಂಡುನೊದಲಿಯಾರ್.

ಕಲ್ಕತ್ತೆಯಲ್ಲಿ ರಾಕ್ಷಸರ ಭಯ

ಕಲ್ಕತ್ತಾ ನಗರಕ್ಕೆ ಕೆಳ ದಿನಗಳಕೆಳಗೆ ತ್ರಿಪುರಮಹಾರಾಜರು ಬಂದಿದ್ದರು. ಅವರ ರಕ್ಷಣ ಸೇವಕನು 8 ಅಡಿ 6 ಅಂಗುಲ ಉದ್ದವಿರುವನು ಅವರು ಇಳಿದಿದ್ದ ನೆರೆ ಹೊರೆಯ ಮನೆಯಲ್ಲಿ ರಾಕ್ಷಸನ ಪಾದದ ಗುರುತುಗಳು ಕೆಲದಿನಗಳ ಕೆಳಗೆ ಕಾಣಿಸಿದವಂತೆ. ಇದರಿಂದ ರಾಕ್ಷಸನೊಬ್ಬನು ಬಂದಿರುವನೆಂದು ಜನರು ಭಾವಿಸಿಹೆಚ್ಚಾಯಿತು. ತ್ರಿಪುರಾಮಹಾರಾಜರ ಅಂಗರಕ್ಷಸನೇ ರಾಕ್ಷಸನಿರಬಹುದೆಂದು ಜನರು ಅವನನ್ನು ಮುತ್ತಿದರು. ಅವನನ್ನು ಬಿಡಿಸಲು ಮಹಾರಾಜರು ಪೋಲೀಸರ ಸಹಾಯವನ್ನು ಕೇಳಬೇಕಾಯಿತು. ಅವನು ಹೊರಬೀಳುವುದೇ ಕಷ್ಟವಾಯಿತು. ಒಂದು ದಿನ ಸಾಯಂಕಾಲ ಅವನು ವಿರಾಮಕ್ಕಾಗಿ ಹೊರಬಂದಾಗ ಜನರು ಹಿಂ ನಡಿದರು. ಅವನು ಬಾಲಿಗಂಜ ಪೋಲೀಸು ಸ್ಟೇಷನದಲ್ಲಿ ಅವಿತುಕೊಳ್ಳಬೇಕಾಯಿತು. ಈ ನವನಾಗರೀಕ ಯುಗದಲ್ಲೂ ಜನರ ಹುಚ್ಚು ಹೋಗಲಿಲ್ಲ.

ಹಿಂದೂಸ್ತಾನದ ಆರಳೆಯನ್ನು ಯಾರು, ಎಷ್ಟು ಕೊಳ್ಳುವರು?

1939 ನೇಯ ಜನವರಿಗೆ ಆಪ್ಯಿರಾದ ಆರ್ಥವರ್ಷದಲ್ಲಿ 965300 ಆರಳೆಯ ಗಂಟುಗಳು (ಬೇಲ್ಸ್) ಪ್ರಪಂಚದ ಎಲ್ಲಾದೇಶಗಳಿಗೂ ರಫ್ತಾದವು. ನಮ್ಮ ದೇಶದ ಬಟ್ಟೆಯಗಿರಣಿಗಳು 15,41,000 ಗಂಟುಗಳನ್ನು ಉಪಯೋಗಿಸಿ ಕೊಂಡವು. ಉಳಿದ ದೇಶಗಳು ಈ ಪ್ರಕಾರವಾಗಿ ನಮ್ಮಿಂದ ಕೊಂಡವು

ದೇಶದ ಹೆಸರು	ಜನವರಿ 1939 ಕ್ಕೆ ಮುಗಿಯುವ ಆರ್ಥವರ್ಷ	
ಇಂಗ್ಲೆಂಡ್	15,7000	ಗಂಟು-ಯಾ-ಬೇಲ್
ಜರ್ಮನಿ	83000	,,
ಫ್ರಾನ್ಸ್	10,7000	,,
ಇಟಲಿ	35000	,,
ಜೆಕಸ್ಲೊವೇಕಿಯಾ	5000	,,
ಬೆಲ್ಜಿಯಂ	63000	,,
ಯೂರೋಪದ ಇತರ ದೇಶಗಳು	52000	,,
ಜಪಾನ್	5,0,6000	,,
ಚೀನ	5,0000	,,
ಅಮೆರಿಕಾ (ಸಂಯುಕ್ತ-ರಾಷ್ಟ್ರಗಳು)	19,000	,,
ಕ್ಯಾನಡಾ	1000	,,
ಪ್ರಪಂಚದ ಇತರ ದೇಶಗಳು (ಚಿತ್ರಸೇರಿ)	20,000	,,

ಭವಿಷ್ಯತ್ ಫಲಸೂಚಕವಾದ ವರ್ಷ ಫಲಗನ್ನಡಿ

ಬೆಲೆ ಸುಲಭ) 12-4-1940 ರಿಂದ 13-4-1941 ರವರೆಗೆ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ. (ಅಪೂರ್ವ, ಮಹತ್ವದ ವಿಷಯಗಳು

ವಾರವಾರವೂ ವಿವಿಧ ಪತ್ರಿಕೆಗಳನ್ನು ಕೊಂಡು, ಅಸಂದಿಗ್ಧ ಮತ್ತು ಅನುಮಾನಾಸ್ಪದ ಭವಿಷ್ಯಗಳನ್ನು ಓದಿ ಅತುರ ಪಡಬೇಡಿರಿ. ಇದನ್ನು ಸರಿಯಾದ ಗುಣಾಕಾರದಿಂದ ವಿಶೇಷ ಶ್ರಮವನ್ನು ಸಹಿಸಿ ಬರೆಯಲಾಗಿದೆ. ವಿದ್ಯಾರ್ಥಿಗಳನ್ನೊಳಗೊಂಡು ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ನಕ್ಷತ್ರಫಲ, ರಾಸಿಫಲ, ಮೂಸಫಲ, ಕಾಲಸಹಿತವಾದ ಮಾರಕಳಾಲವನ್ನು ಕೂಡ ಬರೆಯಲಾಗಿದೆ **ಗೋವಾ, ಮುಂಬೈ, ಮದ್ರಾಸು, ಬೆಂಗಳೂರು, ಮೈಸೂರು, ಪೂನಾ ನಗರಗಳಲ್ಲಿ** ನಡೆಯುವ ಸಟ್ಟಾ, ಲಾಟ್ರಿ, ಶರ್ತು-ಕುದುರೆ ಜೂಜು (ರೇಸು) ಇವುಗಳಿಂದ ಲಾಭ ಪಡೆಯಲು ಅನುಕೂಲವಾಗುವಂತೆ ನ ಬರು, ವಾರ, ಸ್ಥಳ, ಕಾಲ - ದಿಕ್ಕನ್ನನುಸರಿಸಿ ವಿಮ್ಮ ರೂಪಾತಿಶಯ ನಡೆ-ನುಡಿಗಳನ್ನು ತಿಳಿಯಬೋಪಾದಿಯಲ್ಲಿ ಪುಸ್ತಕದಲ್ಲಿ ಕಾಣಿಸಲಾಗಿದೆ. ಬರೆಯದಿರುವ ಕೆಲ ನಕ್ಷತ್ರಗಳಿಗೆ ಈ ವರ್ಷ ಧನಯೋಗವಿಲ್ಲವೆಂದು ಭಾವಿಸಬೇಕು. ಕರ್ಮಾನುಸಾರದಿಂದ ಬರುವ ವಿಪತ್ಪರಂಪರೆಗಳ ನಿವಾರಣೆಗೆ ಪ್ರಾರ್ಥಿಸಬೇಕಾದ ದೇವತೆಗಳು, ಕೊಡಬೇಕಾದ ದಾನಗಳು ಬರೆದಿದೆ. ನಿಮ್ಮ ಉದ್ಯೋಗ - ವ್ಯವಹಾರಾದಿಗಳಿಗೂ ದಿನ ಭವಿಷ್ಯ ಕ್ರಯ ೦-೪-೦.

ಹನ್ನೆರಡು ವರ್ಷಗಳ ಇಂಥಾ ಭವಿಷ್ಯ ೧-೦-೦. ಪೋಸ್ಟು ಚಾರ್ಜು ೦-೪-೦. ಜನ್ಮಪತ್ರಿಕೆ ಕ್ರಯ ೧ ೪-೦

ಸರಸ್ವತಿ ಮಹಾಯಂತ್ರ— ವಿದ್ಯಾರ್ಜನೆ ಮಾಡುವ ಸಕಲ ವಿದ್ಯಾರ್ಥಿಗಳೂ, ದೊಡ್ಡ ದೊಡ್ಡ ಪರೀಕ್ಷೆಗಳಿಗೆ ಕೂಡ ತಕ್ಕಂಥವರೂ ಈ ಯಂತ್ರವನ್ನು ತಮ್ಮ ಕೋಣೆಯಲ್ಲಿಟ್ಟು ಪ್ರತಿದಿನ ಭೋಜನಕಾಲಕ್ಕೆ ಉಪಯೋಗಿಸಬೇಕು. ಪರೀಕ್ಷಾಕಾಲಕ್ಕೆ ಧರಿಸಿಕೊಂಡರೆ ಪರೀಕ್ಷೆಯಲ್ಲಿ ಉತ್ತೀರ್ಣರಾಗುವರು. ಗಾನ, ಸಂಗೀತ ಕಲಿಯುವವರು ಇದನ್ನು ಧರಿಸಿಕೊಂಡರೆ ಸುಲಭವಾಗಿ ಕಲಿಯಲು ಅವಕಾಶವಾಗುವುದು. ಕ್ರಯ ೫-೨.೦

ಶ್ರೀ ರಾಮವಾನಸ ಪೂಜಾ ವಿಧಾನಂ— ಬ್ರಹ್ಮದೇವರು ಮಾನಸ ಸರೋವರದಲ್ಲಿ ಪೂಜೆಮಾಡಿದ ಕ್ರಮವನ್ನೊಳಗೊಂಡಿದೆ. ಕ್ರಯ ೦.೬.೦. ಒಂದೆರಡು ಪುಸ್ತಕಗಳಿಗೆ ಪೋಸ್ಟುಸ್ಟ್ಯಾಂಪು ಕಳುಹಿಸಿರಿ ಅಥವಾ ವಿ. ಪಿ. ಮಾಡಿರಿ.

ನಮ್ಮ ವಿಜಂಟರು— **ಯಸ್. ವೆಂಕಟಸುಬ್ಬಶಾಸ್ತ್ರಿ,**

ಯಜಮಾನ್ ಅಂಡ್ ಬ್ರದರ್ಸ್ ಬಳ್ಳಾರಿ. (ಅಸ್ಟ್ರಾಲಜರ್) ಜ್ಯೋತಿಷ್ಯರು, ಬ್ರಾಹ್ಮಣರ ಬೀದಿ, **ಬಳ್ಳಾರಿ**

ಸುಶೀಲೆಯ ಪ್ರಣಯ ಪತ್ರ.

(ನೀಲಕಂಠ.)

ವಸಂತಮಾಸದ ಹುಣ್ಣಿವೆಯ ಚಂದ್ರನು ವುದಯಿಸಿ ನಾಲ್ಕುತಾಸು ಮಿಕ್ಕಿದ್ದಿತು. ಭೂದೇವಿಯು ತನ್ನ ಬಿಳಿಯ ಪತ್ತಲವನ್ನುಟ್ಟು ಸಂಚರಿಸುವಂತೆ ಭಾಸವಾಗುತ್ತಿತ್ತು. ಶಾಂತತಾ ಸಾಮ್ರಾಜ್ಯವು ನೆಲೆಸಿತ್ತು. ಇಂಥಾ ಪ್ರಶಾಂತನಾದ ಸಮಯದಲ್ಲಿಯೂ ಕೂಡಾ ಸುಶೀಲೆಯು ತನ್ನ ಕೂಡುಡಿಯಲ್ಲಿ ಒಳ್ಳೆ ನಿಜಾರಮಗ್ನಳಾಗಿ ಕುಳಿತಿದ್ದಳು. ಅವಳ ಮೊಗವು ಕಳೆಗುಂದಿ ನಿಸ್ತೇಜವಾಗಿತ್ತು. ವಿಚಾರವನ್ನು ಅವಳು ಎಷ್ಟು ದೀರ್ಘವಾಗಿ ಮಾಡಿದಂತೆ ಅವಳ ಕಣ್ಣೊಳಗಿಂದ ಅಶ್ರುಧಾರೆಗಳು ಪ್ರವಾಹವಾಗಿ ಹರಿಯುತ್ತಿದ್ದವು. ಸುಶೀಲೆಗೆ ಏನಾಗಿರುವದೆಂಬದು ಯಾರಿಗೂ ತಿಳಿಯದ ವಿಷಯವಾಗಿತ್ತು. ತನ್ನನ್ನು ವಂಚಿಸಿದ ವಸಂತನ ಪ್ರೇಮ - ಪೂರ್ಣ ದೃಷ್ಟಿಯ ಅಭಾವವೇ ಅವಳಿನ್ನಿಂದು ಈ ರೀತಿ ಚಿಂತೆಗೆ ಗುರಿಮಾಡಿದೆ. ಹಿಂದಿನ ಹಿಗ್ಗಿನ ನೆನಪು ಇಂದಿಗೆ ಅಗಾಧವಾದ ಮತ್ತು ಅಸಹನೀಯವಾದ ದುಃಖವನ್ನುಂಟು ಮಾಡುತ್ತಿದೆ. ವಸಂತನು ಅವಳನ್ನು ಪಂಚಪ್ರಾಣನೆಂದು ಪ್ರೀತಿಸುತ್ತಿದ್ದ ಆವಳನ್ನಗಲಿ ಒಂದು ಕ್ಷಣವಾದರೂ ಇರುತ್ತಿದ್ದಿಲ್ಲ. ಆದರೆ ಈಗ ಅವಳ ಮೊಗವನ್ನು ನೋಡಲೊಲ್ಲನು. ಅವಳನ್ನು ತನ್ನಿಂದ ಎಷ್ಟೋ ದೂರವಾಗಿ ಬಿಸುಟಿ ಹೋಗು ನಿನ್ನಲ್ಲಿ ತನ್ನ ಅನುರಾಗದ ಬೇರು ಕಿತ್ತಿದೆ" ಎಂದು ಹೇಳಿದಂತೆ ಅವಳಿಗೆ ಅವನ ವರ್ತನೆಯಿಂದ ಭಾಸವಾಗುತ್ತಿತ್ತು. ಹೀಗೆ ಎಷ್ಟೋ ರೀತಿಯಲ್ಲಿ ವಿಚಾರಿಸಿದವಳಾಗಿ, ಯಾವ ನಿರ್ಧಾರಕ್ಕೂ ಬಾರದೆ! ಅಶ್ರುಧಾರೆಗೆ ಆಶ್ರಯವನ್ನಿತ್ತಳು ----

ವಸಂತನಿಗೆ ತನ್ನ ಜೀವಮಾನದಲ್ಲಿ ಅದೊಂದು ಸುದಿನ. ಆದರೆ ಅವನ ಆಶೆ ಆಕಾಂಕ್ಷೆಗಳು ಅಂದಿನಂಥಾ ಸೌಭಾಗ್ಯ ಸುಖವನ್ನು ಅನುಭವಿಸುವ ಮತ್ತೊಂದು ವಿಧಿತಕಾಲವು ಅವನ ಜೀವನದಲ್ಲಿ ಜನ್ಮವೆತ್ತಲಿಲ್ಲ. ವಸಂತನು ತನ್ನ ಬಿ. ಎ. ವಿದ್ಯಾಭ್ಯಾಸವನ್ನು ಪೂನಾ ಕಾಲೇಜದಲ್ಲಿ ತಮ್ಮೊಬ್ಬ ಕೇವಲ ಪರಿಚಯಸ್ಥರ, ಮನೆಯಲ್ಲಿ ಇದ್ದು ತನ್ನ ಅಭ್ಯಾಸನವನ್ನು ಸಾಗಿಸಿದ್ದನು. ಈ ಮನೆಯಲ್ಲಿ ಮತ್ತಾರೂ ಇರಲಿಲ್ಲವಾದರೂ ಪಿತ್ರುರಹಿತಳಾದ ನಿರ್ಭಾಗ್ಯ ಸುಶೀಲೆ ಅವರ ತಾಯಿ ಮತ್ತೊಬ್ಬ ಅಳುನುಗ.

ಹೀಗೆ ವಸಂತನನ್ನು ಬೆರಿಸಿ ನಾಲ್ಕು ಜನರ ಜೀವನ ನೌಕೆಯು ಸಮಾಜ ಪ್ರಸಂಚದ ತೆರೆಗಳಲ್ಲಿ ಸಾಗಿತ್ತು. ಸುಶೀಲೆಯ ತಾಯಿಯು ವಸಂತನನ್ನು ಪ್ರೀತಿಯಿಂದಲೂ, ಮುತುವರ್ಜೆಯಿಂದಲೂ ಅವನ ಅಭ್ಯಾಸಕ್ಕೆ ಯಾವ ಕೊರತೆಯೂ ತಟ್ಟದಂತೆ ಅನುಸರಿಸುತ್ತಿದ್ದರು. ವಸಂತನೆ ಸುಶೀಲೆಯೂ ಒಬ್ಬರನ್ನೊಬ್ಬರು ಅನನ್ಯ ಪ್ರೀತಿಯಿಂದಲೂ, ಸಲುಗೆಯಿಂದಲೂ ನಡೆದು ಕೊಳ್ಳುತ್ತಿದ್ದರು. ಎಷ್ಟೋ ಸಲ ವಸಂತನು ಸುಶೀಲೆಗೆ ತನ್ನನ್ನೇ ವಿವಾಹವಾಗುವದಾಗಿ ಹೇಳುತ್ತಿದ್ದನು. ಯಾರ ಆತಂಕವೂ ಇಲ್ಲದೆ ಇವರ ಸರಳ ಜೀವನವು ಮಿಲಿನವಾಗಿ ನಡೆದಿತ್ತು. ಸುಶೀಲೆಯು ತನ್ನ ಹೆಸರಿಗೆ ತಕ್ಕ ಹಾಗಿ ಸುಶೀಲೆಯೇ ಆಗಿದ್ದಳು. ವಸಂತನಿಗೆ ಸಹ ಭಾಗಿನಿಯಾಗಲು ಅನುರೂಪಳಾಗಿದ್ದಳು. ಇವಳ ತಾಯಿಯಾದರೂ, ಸುಶೀಲೆಯನ್ನು ವಸಂತನಿಗೆ ಧಾರೆಯೆರೆದು ಮುಂದಿನ ಸುದಿನಗಳನ್ನು ನೋಡಲು ಆತುರಳಾಗಿದ್ದಳು. ವಸಂತನು ಸಹಾ ಒಪ್ಪಿ ಅಂತಃಕರಣ ಪೂರ್ವಕವಾಗಿ ಸಹಕರಿಸಿದ್ದನು. ಆದರೆ ಈ ಸಹಕಾರವು ಅವನ ಜೀವನದಲ್ಲಿ ಪ್ರತ್ಯಕ್ಷವಾಗಿ ಉಳಿಯಲಿಲ್ಲ.

ಕೆಲ ಮಾಸಗಳು ಗತಿಸಿದ ತರುವಾಯ ವಸಂತನು, ತಾನು ಬಿ. ಎ ಕ್ಲಾಸಿ

(ಮುಂದಿನ ಪುಟ ನೋಡಿರಿ)

ನಾಕಂಡ ಸುಮಂಗಲಿ

ನಮ್ಮ ದೇಶದ ಆಚ್ಯಾಚಾರಗಳಲ್ಲಿ ವಿತಂತುಪುನರ್ವಿವಾಹ ನಿಷೇಧವಾಗಿದೆ. ಒಪುಕಾಲದಿಂದ ನಡೆದು ಬಂದಿರುವ ಈ ಶೋಚನೀಯವಾದ ಪದ್ಧತಿಯನ್ನು ಖಂಡನೆಮಾಡಿ ಇದನ್ನು ನಿರ್ಮೂಲ ಮಾಡುವುದಕ್ಕೆ, ತಮ್ಮ ಯಾವಜ್ಜೀವವನ್ನು ಆರ್ಪಿಸುವದಕ್ಕೆ ಸಿದ್ಧರಾದ ಸುಧಾರಕರನ್ನು ಅವಶ್ಯೇಕತೆ ಮಾಡುವದು. ಜನರ ಕಲ್ಪನೆಯಿಂದ ಹುಟ್ಟಿದ ಶಾಸ್ತ್ರಗಳಂತೆ ನಡೆದು ಸಂಘದ ಹಿತವನ್ನು ಲಕ್ಷಿಸದಿರುವ ಮಹನೀಯರು ಸಹಾಯ ಇರುವರು. ಸಂಘ ದುರಾಚಾರಗಳನ್ನು ಸಹಿಸದೆ ಸಮಾಜ ಸುಧಾರಣೆಯೇ ಪ್ರಾಮುಖ್ಯವೆಂದು ವಿತಂತು ಪುನರ್ವಿವಾಹಕ್ಕಾಗಿ ತಮ್ಮೆಲ್ಲವನ್ನೂ ತ್ಯಜಿಸಿರುವರೂ ಇವರು. ಏನೂ ತಿಳಿಯವ ನಾಲ್ಕೈದು ವರ್ಷದ ಬಾಲಕಿಗೆ ವಿವಾಹ ಬಾಂಧವ್ಯವೇತಕ್ಕೆ? ನ್ರೇಮ, ದಾಂಪತ್ಯವೆಂಬುವೇ ಅರಿಯದ ಹಸುಮನಗುವನ್ನು ಈರೀತಿ ಬಂಧಿಸುವದು ಒಳ್ಳೆತೇ? ತನ್ನ ಪೂರ್ವಾರ್ಜಿತ ಕರ್ಮವೆಂದು ಬಾಲವಿತಂತುವು ಜೀವಿತ ಪರ್ಯಂತವೂ ಸುಖಾಕ್ಷರನೆಯಂತೆ ಪುನರ್ವಿವಾಹವಿಲ್ಲದೆ ಬಾಳಬೇಕೇ? ಬಾಲವಿತಂತುವನ್ನು ಸುಮಂಗಲೆಯಾಗಿ ಮಾಡಿ ನಮ್ಮ ದೇಶದಲ್ಲಿರುವ ವಿತಂತುಗಳನ್ನು ಕಡಿಮೆ ಮಾಡುವದು ಸಂಘದ ಕರ್ತವ್ಯವಾಗಿವೆ. ನಮ್ಮ ಪ್ರಭುತ್ವದವರು 'ಸಹಗಮನ' ಎಂಬ ಕ್ರೂರ ಪದ್ಧತಿಯನ್ನು ನಿಲ್ಲಿಸಲು ಆಗಿನ ಶಾಸ್ತ್ರಗಳು ಬಾಯ್ ಮುಚ್ಚಿದರೂ ಸರ್ಕಾರದ ಯತ್ನದಿಂದ ಆದು ನಿಂತಿತು. ಸರ್ಕಾರವವರು ಇಂತಹ ಅತ್ಯಾಚಾರಗಳನ್ನು ನಿಷೇಧಿಸಲು ಶಾಸನ ಮಾಡಿದರೆ ದೇಶೋಪಕಾರವಾದೀತು.

" ಸುಮಂಗಲಿ " ತೆಲುಗು ಚಿತ್ರವು ವಿಶಾಲದೃಷ್ಟಿಯುಳ್ಳದ ಪೂರ್ವೀಕರ ಕಲ್ಪನೆ ಶಾಸ್ತ್ರಗಳನ್ನ ಸುಸರಿಸಿ, ಸಂಘವು ಬಾಲವಿತಂತು ಪುನರ್ವಿವಾಹವನ್ನು ದೂಷಿಸುವದು. ಇಂತಹ ನಿರ್ವಿಚಾರದ ಸಂಘವನ್ನೂ, ತನ್ನ ಮನಾಪಿಕೃಗಳನ್ನು ಸಹಾ ಲೆಕ್ಕರಿಸಿ ತನ್ನ ಮನಶ್ಶಾಂತಿ ಪಡೆಯುವ ವ್ಯಕ್ತಿ ಜೀವನವೂ; ಭಗ್ನ-ಪ್ರೇಮದ ಪ್ರಣಯ ಜೀವನವೂ; ತನ್ನ ಮನಶ್ಶಾಂತಿಗೋಸ್ಕರ ಹೋರಾಡುವ ವ್ಯಕ್ತಿಯ ವಿಜಯವೂ ವಗ್ಯೆರೇಗಳನ್ನು ಪಾಪಿನಿ ಶಿಕ್ಷರ್ಸವರು ಪ್ರದರ್ಶನೆ ಗಿಟ್ಟಿದ್ದು ಇವರ ವಿವೇಕ ವಿಮರ್ಶೆಯೆಂದು ತಿಳಿಯುವೆನು.

ಶ್ರೀಮತಿ ಕುಮಾರಿ, ಶ್ರೀಗಿರಿ M. A. ಯವರು ಚಲನಾಚಿತ್ರ ಪ್ರಪಂಚಕ್ಕೆ ಹೊಸಬರಾದರೂ ತಮ್ಮ ಯೋಗ್ಯತೆ ಮೀರಿ ನಟಿಸಿರುವರು. ಕುಮಾರಿಯ ನಟನಕೌಶಲ್ಯವು ಕಾಂಚನಮಾಲೆಯ ಮುಖಕ್ಕೆ ಮಸಿ ಹಚ್ಚಿದ್ದಾಗಿದೆ. ನಮ್ಮ ' ಪಂಡೇ ಮಾತರಂ ' ನಿನಿ ರಘುಪಾತ್ರಧಾರಿಯಾದ ಶ್ರೀ ನಾಗಯ್ಯನವರು ದೊಡ್ಡ ಸಂಸ್ಕಾರ ಕರ್ತರಾಗಿ " ಪಂತುಲು " ನಾಮದಿಂದೊಪ್ಪಿದ್ದಾರೆ. ಅಂಧ್ರ ಚಿತ್ರಗಳಲ್ಲಿ ಇಂತಹ ಸಧಿಯಾದ ಚಿತ್ರವು ನನಗೆ ಕಂಡುಬಂದಿಲ್ಲ. ಇದನ್ನು ತಯಾರು ನೂಡಿದವರ ಅಭಿಲಾಷೆಯಂತೆ ಸಂಘ ಅಭಿಪ್ರಾಯಗಳು ಬದಲಾವಣೆ ಹೊಂದಿ ನಮ್ಮ ಹಿಂದೂ ಸಮಾಜಕ್ಕೆ ಹೊಸ ಜ್ಯೋತಿಯುತ್ಪನ್ನವಾಗಲೆಂದು ಆಶಿಸುತ್ತೇನೆ.

ಜಿ. ಶ್ರೀನಿವಾಸಮೂರ್ತಿ, ಸೆ. ಜೋ. ಶಾಲೆ, ಬಳ್ಳಾರಿ.

(ಹಿಂದಿನ ಪುಟದಿಂದ)

ನಲ್ಲಿ ವುತ್ತೀರ್ಣ ಹೊಂದಿದ ಸಂಗತಿಯನ್ನು ಪತ್ರದ್ವಾರ ಅವನ ತಂದೆಗೆ ತಿಳಿಸಿದನು. ಈ ಸಂಗತಿ ಅರಿತವರಾಗಿ ತನ್ನ ಮುಂದಿನ ಅಭ್ಯಾಸದ ಸಲುವಾಗಿ ಪಾಶ್ಚಿಮಾತ್ಯದೇಶಕ್ಕೆ ಕಳುಹಿಸಲು ತಕ್ಕ ವ್ಯವಸ್ಥೆಯನ್ನು ತಾವು ಮಾಡಿರುವದಾಗಿಯೂ ಪತ್ರ ಕಂಡ ನಾಲ್ಕು ದಿವಸಗಳೊಳಗಾಗಿ ಹೊರಟು ಬರಲು ವಸಂತನಿಗೆ ಪತ್ರವನ್ನು ಬರೆದರು. ಈ ವಿಷಯವನ್ನು ಮುಂದೆ ತನ್ನ ರಾಣಿಯಾಗುವ ಸುಶೀಲೆಗೂ ಅವಳ ತಾಯಿಗೂ ಪತ್ರದ ಅಭಿಪ್ರಾಯವನ್ನು ವ್ಯಕ್ತಗೊಳಿಸಿ ಹೊರಡಲನುವಾದನು, ಹೊರಟೇ ಹೋದನು ಆಗಿನ ಸಂಧರ್ಭವನ್ನು ವಾಚಕರೇ ಊಹಿಸ ತಕ್ಕದ್ದು.

ಇಂದಿಗೆ ಯರಡು ವರುಷದ ಮಾತು ವಸಂತನು ತನ್ನ ಪಾಶ್ಚಿಮಾತ್ಯನ ಅಭ್ಯಾಸವನ್ನು ಮುಗಿಸಿ ತನ್ನ ಜನ್ಮ ಭೂಮಿಗೆ ಮರಳಿ ಬಂದಮ್ಮ ಆಯಿತು. ಆದರೆ ಸುಶೀಲೆಯ ಮಾತೇ ಇಲ್ಲ. ಆದರೂ ತನ ನೇನು? ಸಮಾಜದ ಹಿಡಿತದಲ್ಲಿ ಸಿಕ್ಕ ಅವನಿಗೆ ಅಕೆಯ ಸುಖದುಃಖಗಳು ಹೇಗೆ ತಿಳಿಯಬೇಕು.

ಯಾರು ದುಃಖ ಪಟ್ಟರೇನು? ಯಾರು ಅನಂದ ಮಯಸಾಗರದಲ್ಲಿಲೋಲಾಡಿದರೇನು? ಕಾಲನು ಮಾತ್ರ ಯಾರ ಸಲುವಾಗಿ ತಡೆಯುವದಿಲ್ಲ ಇಂದಿಗೆ ತಾನು ವಿವಾಹ ವಿಲ್ಲದಲೇ ಒಂದು ವರ್ಷದ ಮಗುವಿನ ಪಾಲಕಳು. ಆದರೆ ಮಾಡುವ ದಾದರೂ ಏನು? ವಸಂತನು ಸಮಾಜ ಎಂಬ ಒಂದು ಕಾಲ್ಪನಿಕ ರಾಕ್ಷಸನ ದವಡೆಯೊಳಗೆ ಸಿಕ್ಕು ತನ್ನನ್ನು ಪರಿತ್ಯಜಿಸಿದ್ದು ನಿಜ. ತನಗಿನ್ನು ಯಾರುಗತಿ ಎಂಬುದು ನಿಜ, ತಾನು ನಿರ್ಭಾಗ್ಯಳಾವದ್ದೂ ನಿಜ. ಆದರೆ ತನಗಿನ್ನು ಗತಿಯಾರು? ವಿಶಾಲವಾದ ಪ್ರಪಂಚದಲ್ಲಿ ತನಗೆ ಸ್ಥಾನವನ್ನೀಡುವ ಒಬ್ಬ ಮಾನವನಾದರೂ ಇರಲಿಕ್ಕಿಲ್ಲವೇ? ಇರದೇ ಏನು? ಅವರೆಲ್ಲರೂ ತನ್ನ ವಸಂತನಂತೆ ಇದ್ದರೆ? ಯಲ್ಲರೂ ಕ್ಷಣಿಕ ಸುಖಲೋಲುಪ್ತರು ಇರಲಿಕ್ಕಿಲ್ಲವಷ್ಟೇ? ಹಾಗಾದರೆ ಈ ಜಗತ್ತು ಬಟ್ಟು ಪರಲೋಕದಲ್ಲಿ ಯಾದರೂ ತನಗೆ ಸ್ಥಾನವು ಸಿಗುವದೆಂಬ ಕಲ್ಪನೆಯು ಅವಳಿಗೆ ಹೊಳೆದೊಡನೆಯೇ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಗುವದು. ತಾನು ಜಗತ್ತಿನಲ್ಲಿ ಬಾಳಿ ಪುರುಷ ಸಮಾಜಕ್ಕೊಂದು ತಕ್ಕ ಪಾಠವನ್ನು ಕಲ್ಪಿಸಿ ಕೂಡಬೇಕೆಂದು ನಿಶ್ಚಯಿಸಿದಳು. ಮತ್ತು ಸ್ತ್ರೀಯರೆಂದರೆ ತಮ್ಮ ಭೋಗ ವಸ್ತುವಾಗಿರದೆ ಪ್ರಪಂಚ ನಾಟಕದ ನಟ ಎಂಬುದು ಪುರುಷರಿಗೆ ತಿಳಿಯಬೇಕು. ನಾನಾರೀತಿ ವಿಚಾರಸಕ್ತಳಾಗಿ ಕಡೆಗೊಮ್ಮೆ ನಿರ್ಧರಿಸಿ ತನ್ನ ಕೊಠಡಿಯಲ್ಲಿ ಕುಳಿತು ಒಂದು ಸುದೀರ್ಘವಾದ ಪ್ರಣಯಪತ್ರವನ್ನು ವಸಂತನಿಗೆ ಬರೆಯತೊಡಗಿದಳು—

ಈ ಪ್ರಣಯಪತ್ರವನ್ನು ಬರೆಯುವ ಪ್ರಸಂಗವನ್ನು ಅದಾರು ನನ್ನ ಹೃದಯಕ್ಕೆ ಚುಚ್ಚಿ ದುಃಖಕೊಟ್ಟರೆಂಬವನ್ನು ನಿಮ್ಮ ಮೆದುಳಿನ ವಿಚಾರಕ್ಕೂ, ಸಮಾಜಕ್ಕೂ ಬಿಟ್ಟಿದ್ದೇನೆ.

ವಸಂತಾ! ನೀನು ನನ್ನನ್ನಗಲಿ ಇಂದಿಗೆ ೨ ವರುಷಗಳು ಸಂದಿ ಹೋದವು. ಆದಿನ, ನನ್ನನ್ನಗಲುವ ಪ್ರಸಂಗಬಂತು. ಆದಿನದ ಯಾತನೆಯನ್ನು ನಾನಿನ್ನು ಸುರಿಯಲಾರೆ. ನನಗೆ ತಿಳಿಯದಂತೆ ನನ್ನ ಕಣ್ಣಿಲ್ಲಿ ನೀರು ಹರಿಯುತ್ತಿತ್ತು. "ಹೀಗೇಕೆ ಸುಶೀಲಾ! ನನ್ನ ಪಾಠಿನಲ್ಲಿ ನಿನಗೆಭರವಸೆ ಇಲ್ಲವೇ? ಸ್ವಲ್ಪತಾಳು. ಆಮೇಲೆ ನಾನು ಕೊನೆಯ ವರಿಗೂ ನಿನ್ನವನಾಗಿಯೇ ವುಳಿಯುತ್ತೇನೆ' ನಿನ್ನ ನ್ನುಂದೆ ಸಮಾಜವು ಕ್ಷುಲ್ಲಕ' ಎಂದು ಸಂತೈಸಿ ಅಂದುರಾತ್ರಿ ನನ್ನನ್ನು ಭೋಗ್ಯವಸ್ತುವನ್ನಾಗಿ ಬಳಿಸಿಕೊಂಡಿರಿ. ಆದಿನ ನೆನಪು ಇಂದಿಗೆ ನನ್ನನ್ನು ಸಮಾಜ ಬಾಹಿರಳನ್ನಾಗಿ ಮಾಡಿತು. ಆದರೇ ನೀನು ಅನಂತವಾದ ಜಗತ್ತಿನಲ್ಲಿ ಅನನ್ಯನಾಗಿ ಪ್ರೀತಿಸುವ ನನ್ನ ಜೀವನವನ್ನು ದುಃಖಕ್ಕೇಡು ಮಾಡಿದೆ. ಆನಿನ್ನ ದರ್ಪ ಮತ್ತು ತುಚ್ಛ ಭಾವನೆ ಇಂದು ಸಮಾಜದಲ್ಲಿ ರೂಢಿಗೊಂಡವು ನನ್ನಲ್ಲಿದ್ದ ವೈನೀಸ್ಯೇನು ಮತ್ತು ಧರ್ಮವಲ್ಲಯ ದೃಢವಾದ ನಂಬಿಕೆಗಳನ್ನು ಸಹಾ ನಾಶ ಮಾಡಿದವನು ನೀನೆಂದು ನನ್ನ ಆತ್ಮದಲ್ಲಿನ ಪರಮಾತ್ಮನಿಗೆ ಸರಿ ಹೇಳುವೆ. ವಸಂತಾ ಸ್ತ್ರೀಯೆಂದರೆ ಪುರುಷರ ಉಪಭೋಗ್ಯ ವಸ್ತು ಎಂದು ತಿಳಿಮಕೊಳ್ಳುವ ನಿನ್ನಂಥಾ ಮೂಢರು ಸಮಾಜದಲ್ಲಿ ಇನ್ನೆಷ್ಟು ಮಂದಿ ಇರುವರೋ ನಾಕಾಣೆ. ಸ್ತ್ರೀಯೆಂದರೆ ಒಂದು ಜೀವ ಪ್ರಪಂಚದ ಸುಖದುಃಖಗಳಲ್ಲಿ ಸಮಭಾಗಿ ಎಂದು ಕಲ್ಪಿಸಿಕೊಳ್ಳುವ ಒಬ್ಬನಾದರೂ ಪವಿತ್ರದ ಹೃದಯದ ಪುರುಷನು ನಿನ್ಯುದ್ಧರಿಗೆ ಅದರ್ಶನಿರಬೇಕು. ಆತ್ಮನನ್ನು ಹುಡುಕಲು ಹಾಗು ಅವನನ್ನು ಸೋದರನೆಂದು ಪ್ರೀತಿಸಲು ನಾನು ನಿರ್ಭೀತಳಾಗಿ ಸಮಾಜದ ಬೆದರಿಕೆ ಇಲ್ಲದೆ ಹೊರ ಹೊರಟಿದ್ದೇನೆ. ನಾನಿಷ್ಟು ಹೇಳಬಲ್ಲೆ ಸುಖವು ನಿರ್ಧಾರಕ್ಕಾಗಿ, ಪ್ರೇಮವು ಕ್ಷಣಿಕತ್ವಕ್ಕಾಗಿ ಎಂದು ತಿಳಿಯುವರು ಸಮಾಜದ ಭೀತಿಗೆ ತತ್ತಿಹಾಕಬಹುದು. ನೀನು ನನ್ನನ್ನು ವರಿಸುವೆನೆಂದು ಹೇಳಿ ನಿನ್ನ ಕಾಯಸಾಧನೆಯ ಸಲುವಾಗಿ 'ನಾನು ಕಾಮಾಂಧನಿರುವೆ' ಎಂದು ನನಗೆ ಹೇಳಲಿಕ್ಕೆ ಯಾರಭೀತಿ ಯುಂಟಾಗುವದಿಲ್ಲ. ವಸಂತಾ ಆಗ ನೀನು ಪ್ರೀತಿಸಿದ್ದ ಈಗ ಹೇಳಲು ನಾಚಿಕೆ ಯಾಗುತ್ತಿ ಮತ್ತು ಸಿಟ್ಟು ತಡವರಿಸುತ್ತದೆ. ಆದರೆ ನಿನ್ನ ಕತೋರ ಮತ್ತು ನೀಚ ಮನೋವೃತ್ತಿಯನ್ನು ಸಮಾಜವೆ ನಿನ್ನನ್ನು ತುಚ್ಛೀಕರಿಸುತ್ತದೆ. ಆದರೆ ನನಗೆ ಕೇಳುವೆ! ಇಂಥಾ ನಡತೆಯು ಪುರುಷರಿಗೆ ಅಷ್ಟೆಯೇ? ಸ್ತ್ರೀಯರಿಗೂ ಉಂಟೋ? ಇದರ ಉತ್ತರ ನಾನು ಅಪೇಕ್ಷಿಸುವದಿಲ್ಲ. ನೀನೇ ವಿಚಾರಿಸು. ನಿನ್ನ ಸಪಭಾಗಿನಿಯಾಗಲು ನಿನ್ನನ್ನೆನು ನಂಬಿದ ನಾರಿಯನ್ನು ಸಮಾಜನ ಬಾಹಿರಳನ್ನಾಗಿಮಾಡಿ ಹೊರದೂಡಿದ ಪ್ರೇಮದ್ರೋಹಿಯಲ್ಲವೆ? ಇದಕ್ಕೆ ನಿನಗಾವ ಶಿಕ್ಷೆ? ಸುಶೀಲೆ.... .....

ವಸಂತನು ಪತ್ರವನ್ನು ಮೊದಲಿಂದ ಕಡೆವರಿಗೂ ಯರಡಾವರ್ತಿ ಓದಿದನು, ಓದಿದಂತೆ ನಿಚ್ಚಾರ ಶೂನ್ಯನಾಗಿ ಕಣ್ಣು ಕತ್ತಲೆಗವಿದವು. ಈಗ ಬುದ್ಧಿ ಬಂತು; ತಲೆ ಬಡಿಯಿತು. ತನ್ನ ಸುಶೀಲೆಯನ್ನು ಹೊಂದಲು ಹೊರಟನು. ಹುಚ್ಚನಾದನು. ಆದರೆ ಸುಶೀಲೆಯು ವಿಶ್ವಪ್ರಪಂಚದಲ್ಲಿ ಸುಶೀಲೆಯಾಗಿ ಎಲ್ಲಡೆಗಿದ್ದಳೋಯಾರುಬಲ್ಲರು?

ಸೆಂಟ್ ಜೋಸೆಫ್ಸ್ ಎಲಿಮೆಂಟರಿ ಹಾಗೂ ಶಾಲಾ ಸಾರಸ್ವತ ಸಂಘ.

ಮೇಲ್ಕಂಡ ಸಂಘದ ಯಾಜಮಾನ್ಯದಲ್ಲಿ 29-6-40 ಸಭೆಯಾಗಿ 1940-41 ಕ್ಕೆ ಸಂಘದ ಉದ್ಯೋಗಿಗಳ ಚುನಾವಣೆಯಾಯಿತು. ಶ್ರೀ. ಜೆ. ಶ್ರೀನಿವಾಸ ಮೂರ್ತಿ ಯವರನ್ನು ಸಂಘದ ಅಧ್ಯಕ್ಷರಾಗಿಯೂ, 7ನೇ ತರಗತಿಯ ಸುಸಿರಾಜು, ಅನ್ನಾಮಲೈ ಯವರನ್ನು ಕಾರ್ಯದರ್ಶಿಗಳಾಗಿಯೂ ಆರಿಸಲಾಯಿತು.

ಬಾಲಭಟ ಸಂಘ
ಅಧ್ಯಕ್ಷರು ...ಶ್ರೀ. ಜಿ. ರಾಯಪ್ಪ.
ಜೂನಿಯರ್ ರೆಡ್‌ಕ್ರಾಸ್
ಕೌನ್ಸಿಲರ್- ಶ್ರೀ ಎಸ್. ಸೋಮರಾಜು.
ನಾಟಕದ ಉಸಸಂಘ
ಅಧ್ಯಕ್ಷರು .. ಶ್ರೀ. ಎ. ವೆಂಕಣ್ಣ.
ಕಾರ್ಯದರ್ಶಿಗಳು ಶ್ರೀಮತಿ
ಎ. ಆರೋಗ್ಯಮೇರಿ ಅಮ್ಮಾಳ್.
ಮತ್ತು. ಶ್ರೀಮತಿ ಡಿ. ರೋಜಮ್ಮ.

ಪಾಠಶಾಲಾ ಹೆಡ್‌ಮಾಸ್ತರಾದ ಶ್ರೀ. ಎಂ. ಸುಬ್ರಹ್ಮಣ್ಯಂ. ನವರು ಸಂಘದ ಪರವಾಗಿ ಬಾಲರಿಗೆ ಹಿತವಾದ ಹೇಳಿದರು.

ಶ್ರೀ ಸುಭಾಸಚಂದ್ರಬೋಸರು ಬಂಧಿತರಾದರು

ಲಖಿಲ ಭಾರತ ಫಾರ್ವರ್ಡ್ ಬ್ಲಾಕ್‌ನ ಅಧ್ಯಕ್ಷರೂ ಸಂಸ್ಥಾಪಕರೂ ಈ ಹಿಂದೆ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದ ಬಾಬೂ ಸುಭಾಸಚಂದ್ರಬೋಸರು ಜೂಲೈ ತಿಂಗಳ ತಾ|| ಕಲ್ಕತ್ತೆಯ ತಮ್ಮ ಸ್ವಗೃಹದಲ್ಲಿ ಇಂಡಿಯಾ ರಕ್ಷಣೆ ಶಾಸನದ ಪ್ರಕಾರ ಬಂಧಿಸಲ್ಪಟ್ಟರು.

೧೮೫೦ನೆಯ ಶತಮಾನದ ಅಂತ್ಯಭಾಗದಲ್ಲಿ ಬ್ಲಾಕ್‌ಹೋಲ್ ದುರಂತವನ್ನು ನಡೆಸಿದರೆಂಬ ಕಾರಣದಿಂದ ಇಂಗ್ಲೀಷರು ಹಾಲೆವೆಲ್ ಸ್ಮಾರಕವೆಂಬ ಸ್ಮಾರಕವನ್ನು ಸ್ಥಾಪಿಸಿದ್ದರು ಇದು ಭಾರತೀಯರ ಆತ್ಮಗೌರವಕ್ಕೆ ಕಳಂಕವೆಂದೂ ಇದನ್ನು ತೆಗೆಯಬೇಕೆಂದೂ ಬೋಸರು ಆಂದೋಳನವನ್ನು ಹೂಡಿದ್ದರು. ಇದರ ವಿರುದ್ಧ ಳನೆಯ ತಾ|| ಸತ್ಯಾಗ್ರಹವನ್ನು ಪ್ರಾರಂಭಿಸುವ ಆಲೋಚನೆ ಇದ್ದಿತು. ಇದನ್ನು ತಡೆಯಲು ಬಂಗಾಳ ಸರಕಾರದವರು ಬೋಸರನ್ನು ಬಂಧಿಸಿದರು

INDIAN PRODUCTS Co.
BELLARY.
(Prop:- M. V. RAO)

Agent for Ceded Dts:—
Mitha Soap Works Bombay. Techno chemical Industries Calicut. All Kinds of Soaps, Washing & Toilet available at Cheap rates.

GUSAL
Best for BATH

ನಮ್ಮಲ್ಲಿ ಎಲ್ಲಾ ತರದ ಸುವಾಸಿಕ ಸಬ್ಬುಗಳು ಸ್ನಾನಕ್ಕೂ, ತೊಳೆಯಲಿಕ್ಕೂ ಅನುಕೂಲವಾಗುವಂಥವು, ಶ್ರೇಷ್ಠವಾದವು ಸುಲಭ ಬೆಲೆಗೆ ದೊರೆಯುತ್ತವೆ.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ.

ಬಳ್ಳಾರಿ ಜಿಲ್ಲೆಯಲ್ಲಿ ಎರಡು ಜಿಲ್ಲಾ ಕಾಂಗ್ರೆಸ್ ಸಮಿತಿಗಳಿವೆ. ಬಳ್ಳಾರಿ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ, ಹೊಸಪೇಟೆ, ಬಳ್ಳಾರಿ, ಸಿರುಗುಪ್ಪೆ ಈ 6 ತಾಲೂಕುಗಳೂ ಆಂಧ್ರ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳೂ ಸೇರಿವೆ. ಕರ್ನಾಟಕ ಪ್ರದೇಶದ ಮುಖ್ಯ ಕಛೇರಿಯು ಬಳ್ಳಾರಿಯಲ್ಲೂ, ಆಂಧ್ರದ ಮುಖ್ಯ ಕಾರ್ಯಾಲಯವು ಆದವಾನಿಯಲ್ಲೂ ಇವೆ. ಜಿಲ್ಲೆಯಲ್ಲಿ ಚುನಾವಣೆಗಳು ಬಂದಾಗ ಎರಡು ಸಮಿತಿಗಳೂಕೂಡಿ ಉಮೇದುವಾರರನ್ನು ಆರಿಸಬೇಕು.

ಅಧ್ಯಕ್ಷ - ಮುತ್ತಿಪಳ್ಳಿ ರಾಘವೇಂದ್ರರಾವು

ಉಪಾಧ್ಯಕ್ಷರು. (1) ಬಿಲ್ಲವ ಚೆನ್ನಪ್ಪ (2) ಐ. ವಸುಪಾಲಪ್ಪ

ಕಾರ್ಯದರ್ಶಿಗಳು — (1) ರಾಮಚಂದ್ರಗುಪ್ತ (2) ಅ. ತಿರುನುಲರಾವು

5 ಜನರ ಕಾರ್ಯಕಾರಿ ಸಮಿತಿಯುಂಟು. ಅವರಿಬ್ಬರು ಸತ್ಯಾಗ್ರಹ ಪ್ರತಿಜ್ಞೆಗೆ ದಸ್ಕತ್ತು ಹಾಕಲಾರದೆ ರಾಜೀನಾಮೆ ಕೊಟ್ಟಿರುವರು.

ಸತ್ಯಾಗ್ರಹ ಸಮಿತಿ

(1) ಶ್ರೀ ಐ. ವಸುಪಾಲಪ್ಪ
(2) ಶ್ರೀ ಸುಬ್ರಹ್ಮಣ್ಯಂ
(3) ಶ್ರೀ ಡಾ. ಆರ್. ನಾಗನಗೌಡ.

S. V. Setty & Bros, Bellary.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ.
ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ.ವೆರೈಟಿ ಎಂಡ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆ ಸಲ ದಯವಿಟ್ಟು ಪರೀಕ್ಷಿಸಿರಿ.

(3-ನೇ ಪುಟದಿಂದ)

ಇನ್ನೂ ಪರೀಕ್ಷೆಯಲ್ಲಿದೆ. ಇವರು ತಮ್ಮ ಸಂಪೂರ್ಣವರದಿಗಳನ್ನು ಸರಕಾರಕ್ಕೆ ಒಪ್ಪಿಸಿರುವುದಿಲ್ಲ. ಈ ಪರೀಕ್ಷಾ ಕೇಂದ್ರದವರು ಸದ್ಯಕ್ಕೆ ಬೆಳೆಯುತ್ತಿರುವ ಒಣ ಪೈರುಗಳ ವಿಷಯಕ್ಕೆ ಮಾತ್ರ ತಮ್ಮ ಪರೀಕ್ಷೆಗಳನ್ನು ಸಾಗಿಸಿರುವರು. ಈಗ ಗೊತ್ತಾಗಿರುವ ಮಟ್ಟಿಗೆ ಭೂಗುಣದ ಅನುಕೂಲ ಪರಿಸ್ಥಿತಿಯು ಹೊರಬಿದ್ದಿದೆ.

ಯುದ್ಧದ ಪರಿಸ್ಥಿತಿ-ಸರಕಾರದ ಆಲೋಚನೆ.

ಕಾಂಗ್ರೆಸ್ ಸರಕಾರವೇ ಇದ್ದು— ಯುದ್ಧವೇ ಆಗದಿದ್ದರೆ - ತುಂಗಭದ್ರಾ ಯೋಜನೆಯ ನಿಶ್ಚಯವು ಆಗುತ್ತಿತ್ತು. ಮದ್ರಾಸ್ ಸರಕಾರದವರು ಸುಮಾರು 5-6 ಕೋಟಿ ರೂಪಾಯಿಗಳು ಹಿಡಿಯುವ ಅರ್ಧಭಾಗದ ಸ್ಕೀಮನ್ನು ಪೂರೈಸಲಿರುವ ನಿಶ್ಚಯವನ್ನು ಮಾಡಿದಂತೆ ಕಾಣುತ್ತದೆ. ಅಂದಾಜು ಪಟ್ಟಿಗಳನ್ನು (Estimates) ಇತರ ವಿವರಗಳನ್ನು ಸಿದ್ಧಪಡಿಸಲು ಸ್ಪೆಶಲ್ ಇಂಜಿನಿಯರ್‌ರವರು ಬಂದಿರುತ್ತಾರೆ. ಸರಕಾರದವರು ತಾವು ಪೂರೈಸಲಿರುವ ಕಾರ್ಯಾರಂಭವು ಯುದ್ಧವು ಮುಗಿದನೇರೆಯೇ ಸಾಧ್ಯವಾಗಬಹುದಾಗಿದೆ.

"ಅಯಾ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ"

ಎಂಬಾದೆ ಗನುಸುಸಿ ದತ್ತ ಸುಂಡಲದ ಕ್ಷಾಮಪೀಡಿತ ಜನರಿಗೆ ಇನ್ನೂ ಕೆಲ ವರ್ಷಗಳು ಆರ್ಥಿಕ — ಮುಕ್ತಿ ಇಲ್ಲ. ನಮ್ಮ ಮುಂದಿನ ಜನಾಂಗವಾದರೂ — ತುಂಗಭದ್ರಾ ಕಾಲುವೇಗಳನ್ನು ಕಾಣಲೆಂದು ಹಾರೈಸೋಣ.

ಪಂಪಾ ದಂತಧಾವನ ಚೂರ್ಣ

'ಉಪ್ಪು ಮತ್ತಿ ಸಿಹಿ' ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಉತ್ತಮ ಹಲ್ಲು ಜ್ಜುವ ಪುಡಿ ಯಲ್ಲೂ ಕಡೆಯಲ್ಲೂ ಸಿಗುತ್ತೆ

ಪಂಪಾ ಕೆಮಿಕಲ್ ವರ್ಕ್ಸ್
ಬಳ್ಳಾರಿ

ಬ್ರಿಟಿಶ ಹಡಗು ನಿಲ್ಲಿಸಲ್ಪಟ್ಟಿದೆ

ಜಪಾನಿನ ಕೃತ್ಯ

ಟೆಂಟ್ ಸೀನ್‌ನಲ್ಲಿಯ ಫ್ರೆಂಚ್ ಕ್ಷೇತ್ರದಿಂದ ಮದ್ದುಗುಂಡುಗಳನ್ನು ಶಸ್ತ್ರಾಸ್ತ್ರಗಳನ್ನು ಹೊತ್ತುಕೊಂಡು ಷಾಂಗೈ ಫ್ರೆಂಚ್ ಕ್ಷೇತ್ರಕ್ಕೆ ಹೊರಟಿದ್ದ "ಜೆಂಕಿಂಗ್" ಎಂಬ ಬ್ರಿಟಿಷ್ ಹಡಗನ್ನು ವೂಸಂಗ್ ಎಂಬಲ್ಲಿ ಜಪಾನ್ ಸೈನಿಕರು ತಡೆದು ನಿಲ್ಲಿಸಿದ್ದಾರೆ. ಆ ರೀತಿ ಆಯುಧಗಳನ್ನು ಸಾಗಿಸುತ್ತಿರುವುದಕ್ಕಾಗಿ ಉಗ್ರವಾದ ಪ್ರತಿಭಟನೆ ಮಾಡಲಾಗುವುದೆಂದು ಜಪಾನೀಯರು ತಿಳಿಸಿದ್ದಾರೆ.

ಬ್ರಿಟಿಷ್ ಕ್ಷೇತ್ರಗಳ ಮೇಲೆ ಬಾಂಬುಗಳು..

ಬ್ರಿಟನ್ನಿನ ರಕ್ಷಣಾ ಕಾಯೆಯ ಪ್ರಕಟಣೆ

9ನೆಯ ತಾ॥ ಮಂಗಳವಾರ ಸಾಯಂಕಾಲ ಶತ್ರುಗಳ ವಿಮಾನಗಳು ಈಸ್ಟ್ ಆಂಗ್ಲಿಯದಲ್ಲಿರುವ ನಗರಗಳ ಮೇಲೆ ಬಾಂಬುಗಳನ್ನು ಸುರಿಸಿದವು. ಅವುಗಳಲ್ಲಿ ಕೆಲವು ಬೀದಿಗಳಲ್ಲಿಯೂ ಭವನಗಳ ಮೇಲೂ ಬಿದ್ದವು. ಸಿವಿಲ್ ಪ್ರಜೆಗಳಲ್ಲ ನೇಕರಿಗೆ ಗಾಯಗಳಾದವು. ಕೆಲವರು ಕೊಲ್ಲಲ್ಪಟ್ಟರು.

ಈ ದಿನ ನಡೆದ ವಿಮಾನ ಹೋರಾಟದಲ್ಲಿ ಶತ್ರುಗಳ 4 ವಿಮಾನಗಳನ್ನು ಕೆಡವಲಾಗಿತ್ತೆಂದು ನೊದಲು ಸೂಚಿಸಲಾಗಿದೆ. ಈಗ ಆ ವಿಮಾನಗಳ ಜೊತೆಗೆ ಇನ್ನು 14 ವಿಮಾನಗಳನ್ನು ಕೂಡ ನಾಶಮಾಡಲಾಯಿತೆಂದು ತಿಳಿದುಬಂದಿದೆ.

The General Agencies Company Ltd, Bellary.

Notice is hereby given that an extraordinary General Meeting of the shareholders of the The General Agencies Co. Ltd, was held on 23rd June 1940 at 4 P. M at the Registered office of the Company and resolved to wind up the company under the Indian Companies Act 1914 section 203 clause 2. Sri S. B Veerana Gowda is appointed as the liquidator.

Bellary 23-6-40

S. B. VEERANA GOUD,
Managing Director & Liquidator.

ದಿ ಜನರಲ್ ಏಜನ್ಸೀಸ್ ಕಂಪನಿ ಲಿಮಿಟೆಡ್ ಬಳ್ಳಾರಿ.

ದಿ ಜನರಲ್ ಏಜನ್ಸೀಸ್ ಕಂಪನಿಯ ಪೇರುದಾರರ ವಿಶೇಷಾಧಿವೇಶನವು 23ನೆಯ ಜೂನ್ 1940ನೆಯ ಭಾನುವಾರ 4 ಘಂಟೆಗೆ, ಕಂಪನಿಯ ರಿಜಸ್ಟರ್ಡ್ ಕಛೇರಿಯಲ್ಲಿ ಕೂಡಿ 1913ನೇ ಇಸ್ವಿ ಕಂಪನಿ ಆಕ್ಟ್-203ನೆಯ - 2ನೆಯ ನಿಯಮದ ಪ್ರಕಾರ ಈ ಕಂಪನಿಯನ್ನು ರದ್ದುಮಾಡಲು ನಿಶ್ಚಯಿಸಿ ಶ್ರೀ ಎಸ್. ಬಿ. ವೀರನಗೌಡರನ್ನು ರದ್ದುಪಡಿಸುವ ಅಧಿಕಾರವುಳ್ಳವರಾಗಿ (ಲಿಕ್ವಿಡೇಟರ್) ನಿಯುಕ್ತ ಮಾಡಲಾಗಿದೆ ಯೆಂದು ಈ ಮೂಲಕ ಎಲ್ಲರಿಗೂ ತಿಳಿಯಪಡಿಸಲಾಗಿದೆ.

ಬಳ್ಳಾರಿ 23-6-40

ಎಸ್. ಬಿ. ವೀರನಗೌಡ,
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಲಿಕ್ವಿಡೇಟರ್.

ಲಗ್ಜಾಂಡ್ರಿಯದಲ್ಲಿ ನೌಂಚರ ಹಡಗುಗಳ

ಟಿಷ್ ಸರ್ಕಾರದ ಪ್ರಕಟಣೆ

ಅಲೆಗ್ಜಾಂಡ್ರಿಯನಲ್ಲಿರುವ ಫ್ರೆಂ ಹಡಗುಗಳ ವಿಚಾರವಲ್ಲಿ ಬ್ರಿಟನ್ನಿ ನೌಕಾ ಪಾಪಿಯವರು ಒಂದು ನ್ಪ ನ ಹೊರಡಿಸಿದ್ದಾರೆ.

ಅಲೆಗ್ಜಾಂಡ್ರಿಯದಲ್ಲಿದ್ದ ಬ್ರಿಟಿಷ್ ಕಾ ಬಲವನ್ನಲ್ಲಿ ಬಹಳ ನೀಪ ಂಧನ್ಯವು ನೆಲಸಿದ್ದಿತು. ಫ್ರಾನ್ಸ್ ಪಾಗತವಾಗಬೇಕೆಂಬ ಅಂಪ ಜ್ಞಪಟ್ಟ ಕೂಡಲೇ, ಬ್ರಿಟನ್ನಿನ ಡನಾಯಕರಿಗೂ, ಫ್ರಾನ್ಸು ನಾಕ ಲದ ಆಡ್ಮಿರಲ್‌ರವರಾದ ತ್ರೀಗಾಡ ಯವರಿಗೂ, ಸಂಗ್ಯಾನವನ್ನು ಂಧುವರಿಸುವ ವಿಚಾರದಲ್ಲಿ ಸಾ ಕತೆಗಳು ನಡೆದವು. ಯುದ್ಧ ನಿ ಸುವ ಷರತ್ತುಗಳು ಗೊತ್ತಾದ ೀಲೆ, ಹೊಸ ವರಿಸ್ಥಿತಿಯು ತಲೆ ಾಕಿದ ವಿಚಾರವು ವ್ಯಕ್ತವಪಟ್ಟಿತು. ರಾನ್‌ನಲ್ಲಿದ್ದ ಫ್ರೆಂಚ್ ನೌಕಾ ಬ ಕ್ಕೆ ಕಳುಹಿಸಿದಂತೆ ಷರತ್ತುಗಳನ್ನು ಡ್ಮಿರಲ್ ಗಾಡ್ ಫ್ರೆಯರಿಗೂ ಕಳು ಸಿಕೊಡಲಾಯಿತು. ವಿದೇಶೀಯ ಂದರಿನಲ್ಲಿದ್ದು, ಬಹಳ ಬಲಯುತ ಾದ ನೌಕಾ ಪಡೆಯನ್ನು ಎದುರಿ ಸುವುದು ಕಷ್ಟವೆಂದು ಆಡ್ಮಿರಲ್ ಾಡ್ ಫ್ರೆಯವರು ಅರಿತು, ತನ್ನ ನೌಕೆಗಳ ಕ್ರಮವನ್ನು ಕೈಗೊಳ್ಳುವುದ ಕ್ಕೆ ಅವರು ಒಪ್ಪಿದರು. ಆ ನೌಕೆಗ ಲ್ಲಿದ್ದ ನಾವಿಕರ ಸಂಖ್ಯೆಯನ್ನು ಕಡಿ ಮೆಮಾಡಲಾಯಿತು. ಅಲ್ಲದೆ ಎಣ್ಣೆ ಯನ್ನು ಕೂಡ ಕಡಿಮೆಮಾಡಲಾಯಿ ತು. ನೌಕೆಗಳನ್ನು ಶಸ್ತ್ರಹೀನವ ನ್ನಾಗಿ ಮಾಡಲಾಯಿತು.

ಆ ನೌಕೆಗಳ ನಾವಿಕರನ್ನು ಸಿರಿ ಯಾದೇಶಕ್ಕೆ ಕಳುಹಿಸಿ ಕೊಡಲಾಗು ವುದು. ಅಲ್ಲಿಂದ ಅವರುಗಳನ್ನು ಫ್ರಾನ್ಸಿಗೆ ಕಳುಹಿಸಿಕೊಡಲಾಗುವುದು

೨,೫೦೦ ಜರ್ಮನ ವಿಮಾನಗಳ ನಾಶ

ಯುದ್ಧಾರಂಭವಾದಂದಿನೀ ಜೆಗೆ ಬ್ರಿಟಿಷರು ಜರ್ಮನಿಗೆ ಸೇರಿದ 2,500 ವಿಮಾನಗಳನ್ನು ಹೊಡೆದು ಉರುಳಿಸಿದ್ದಾರೆಂದು ಅಂದಾಜು ಹಾ ಕಲಾಗಿದೆ.

ಯುದ್ಧದಲ್ಲಿ ಚೀನಾಕ್ಕೆ ಆಗಿರುವ ಲಾಭ

—●—

ಚೀನಾ ಯುದ್ಧವು ಆರಂಭವಾಗಿ 3 ವರ್ಷಗಳಾದವು. ಅಂದಿನಿಂದ ಇಲ್ಲಿಯವರೆಗೆ ಜಪಾನಿನ ಕಡೆ 16,00,000 ಮಂದಿ ಸತ್ತರು ಮತ್ತು ಗಾಯಗೊಂಡರೆಂದು ಚೀನಾ ವಿದೇಶಾಂಗ ಸಚಿವರು ತಿಳಿಸಿದ್ದಾರೆ. ನೇ 1ನೇ ತಾರೀಖಿನವರೆಗೆ ಚೀನಾದು 760 ಫೀಲ್ಡ್ ಗನ್‌ಗಳನ್ನೂ 3,300 ಮೆಷಿನ್ ಗನ್‌ಗಳನ್ನೂ ಮತ್ತು 29,000 ರೈಫಲ್‌ಗಳನ್ನೂ ಜಪಾನಿನಿಂದ ಕಿತ್ತುಕೊಂಡಿದೆ.

ಯುದ್ಧದ ಆರಂಭದಲ್ಲಿ ಚೀನಾದಲ್ಲಿ 20 ಲಕ್ಷ ಮಂದಿ ಸೈನಿಕರಿದ್ದರು. ಈಗ 50 ಲಕ್ಷ ಸೈನಿಕರಿದ್ದಾರೆ.

ಮತ್ತೆ ಬ್ರಿಟನ್ನಿಗೆ ಜಪಾನಿನ ಮನವಿ

ಜಪಾನ್ ರೇಡಿಯೋ ಸುದ್ದಿ.

ಬರ್ಮಾ ಮೂಲಕ ಚೀನಾಕ್ಕೆ ಸಂಗ್ರಾಮ ವಸ್ತುಗಳನ್ನು ಸಾಗಿಸುವ ವಿಚಾರವಾಗಿ ಬ್ರಿಟನ್ನಿಗೆ ಜಪಾನು ಮತ್ತೆ ಮನವಿ ಮಾಡಿಕೊಳ್ಳುವುದೆಂದು ಟೋಕಿಯೋ ರೇಡಿಯೋಯಂತ್ರವು ತಿಳಿಸಿತು. ಇಂಗ್ಲಿಷಿನಲ್ಲಿ ಸುದ್ದಿಗಳನ್ನು ತಿಳಿಸುತ್ತ ಮೇಲ್ಕಂಡಂತೆ ತಿಳಿಸಲಾಯಿತು.

ಚುರುಕಾದ, ಶೀಘ್ರ

ಬ್ರಿಟಿಶ ನಾವಿಕಾದಳದ ಈ ನಾವೆಯು ವಿಮಾನಗಳನ್ನು ನಾಶಕಾರಿ ಸಾಮಗ್ರಿಗಳೊಂದಿ

ಈ ಸಂಧಾನಗಳ ಫಲಿತಾಂಶವನ್ನು ಹೆಚ್ಚು ತಾತ್ಪರಭವದಿಂದ ಕಾಣಲು ಸಾಧ್ಯವಿಲ್ಲ. ಏಕೆಂದರೆ, ಅದರ ಮೇಲೆಯೇ ಈ ಎರಡು ದೇಶಗಳ ಬಾಂಧವ್ಯವು ನಿಂತಿದೆ ಎಂಬುದಾಗಿ ರೇಡಿಯೋವು ತಿಳಿಸಿತ್ತು.

ಮುಂದಿನ ಕದನ ಏರ್‌ನಲ್ಲಿ ನಡೆಯುವುದು

—●—

ಈಗ ಆರಂಭವಾಗಿರುವ ಯುದ್ಧದ ಮುಂದಿನ ದೊಡ್ಡ ಹೊಡೆದಾಟವು ಏರ್‌ದೇಶದಲ್ಲಿ ನಡೆಯುಬಹುದು ಎಂಬುದಾಗಿ ಸರಪರಾಜು ಸಚಿವರಾದ ಸರ್ ಮಾಸ್‌ರವರು ಈದಿನ ರಾತ್ರೆ ರೇಡಿಯೋ ಮೂಲಕ ಮಾತನಾಡುತ್ತ ತಿಳಿಸಿದರು.

ನಾವು ಸಂಗ್ರಾಮ ಕ್ಷೇತ್ರದಲ್ಲಿ ಸ್ನೇವೆ. ನಾವು ತಾಟಸ್ಥ್ಯ ನೀತಿಯನ್ನು ಅನುಸರಿ ಯಾರಾದರೂ ಮ ಕತೆಯವರೆಗೆ ಕ ನಾವಿದೆವು. ನಿಜ. ಕೆಗಳ ಫಲವಾ ಯಾರೂ ಬಿ ಲಾಗದು ಎಂಬು ಸಿದರು.

ನಾಣ್ಯಗಳ ೫॥ ಮತ್ತು ನೋಟುಗಳನ್ ಲಾಗುವ

—

ಭಾರತದ ನ ಬಂದಿರುವ ವತನ ವೆಲ್ಲಾ ಕಡೆಗಳಲ್ಲಿ ನ ವುಂಟಾಗಿರುವುದು ನಾಣ್ಯಗಳನ್ನು ಕೆಲ ಕೊಂಡಿರುವುದೇ

ಯುದ್ಧನಾವೆ.

ಕುತ 'ಗನ' ನಾನೆಗಳನ್ನು ಮುಳುಗಿಸುವ ಸುರಂಗ ವಸ್ತೆರ ಾಗಿ ಹೊಗುತ್ತಿರುವುದು

ಾಗೂ ಮತ್ತು ಅ॥ ಮತ್ತು ೯ ರೂಪಾಯಿಗಳ ನೋ
ಟಿವ್ವರಿ ಕಟ್ಟ ಟುಗಳನ್ನು ತಯಾರುಮಾಡಿ ಚಲಾ
ಯಿಂದು ನಾವು ವಣೆಗ ತರುವ ಆಲೋಚನೆಯನ್ನು
ಾ ಈ'ಹೇಳಿ ಈಗ ಇಂಡಿಯಾ ಸರ್ಕಾರದವರು
ಾ ಮೇಲೆ ಮಾಡುತ್ತಿದ್ದಾರೆಂದು ತಿಳಿದುಬಂದಿದೆ.
ಾಮು ಹೇಳ
ಾವರು ತೀ

ಫ್ರೆಂಚ್ ಹಡಗನ್ನು ನಿಲ್ಲಿಸಲಾಗಿದೆ.

ಸಿಂಗಪುರು ಜು. ೧೦

'ಇಲ್ ಡೀ ಫ್ರಾನ್ಸ್' ಎಂಬ ೪೦,೦೦೦ ಟ್ಟ ತ್ಗೂಕ್ಕದ ಫ್ರೆಂಚ್ ಹಡಗನ್ನು ಇಲ್ಲಿ ತಡೆದು ನಿಲ್ಲಿಸಿ, ಬ್ರಿಟಿಷ್ ಸರ್ಕಾರದ ಸೂಚನೆಗಾಗಿ ಕಾಯುತ್ತಿರಲಾಗಿದೆಯೆಂದು ನೌಕಾ ಧಿಕಾರಿಗಳು ತಿಳಿಸುತ್ತಾರೆ

ಜನರಲ್ ಅರಿಟಾರವರ ಎಚ್ಚರಿಕೆ.

" ಪೂರ್ವ ರಾಷ್ಟ್ರಗಳು ಏಷಿಯಾ ದವರಿಗೆ, ಪಶ್ಚಿಮ ರಾಷ್ಟ್ರಗಳು ಯೂರೋಪದವರಿಗೆ " ಎಂಬ ಮನ್ರೋತತ್ವವನ್ನು ಎಲ್ಲರೂ ಗ್ರಹಿಸತಕ್ಕದ್ದು. ಪೂರ್ವ ರಾಷ್ಟ್ರಗಳು ಭೂಗೋಲಕವಾಗಿಯೂ ಐತಿಹಾಸಿಕ ದೃಷ್ಟಿಯಿಂದಲೂ ಒಂದೇ ಆಗಿವೆ. ಇವುಗಳ ತಂಟೆಗೆ ಯೂರೋಪಿನವರು ಬರಬಾರದೆಂದು ಜಪಾನಿನ ವಿದೇಶಾಂಗ ಸಚಿವರಾದ ಅರಿಟಾರವರು ಇಟಲಿ. ಜರ್ಮನಿ, ರಷ್ಯ. ಬ್ರಿಟ್ಟ. ಫ್ರಾನ್ಸ್ ವಗೈರೆ ಯೂರೋಪಿನ ಎಲ್ಲಾದೇಶಗಳಿಗೂ ಎಚ್ಚರಿಕೆ ಇತ್ತಿರುವರು.

ಮಂತ್ರಿ ಮಂಡಳದಲ್ಲಿ ಒಕ್ಕಟ್ಟಿದೆ.

ನಾಜಿ ಪ್ರಜಾರ್ಕ್ಯ ಕೆಸಿಗೂಡಬೇಡಿರಿ. ನಾವು ಐಕಮತ್ಯದಿಂದಕೂಡಿದ ಜನಾಂಗ ನವ್ಮಲ್ಲಿ ಒಡಕೆಲ್ಲಿ ನಾಜಿಗಳ ಗುರಾಮಗಿರಿಗೆ ಸಿಕ್ಕುವ್ದಕ್ಕಿಂತ ಸಾವೇ ಲೇಸೆಂದು ನೆನಿಪಿದ್ದೇವೆ ಸಾವು ಧೈರ್ಯಸ್ಥೈರ್ಯಗಳಿಂದ ಕಾದಾಡುವೆವು ಎಂದು ಹಿಂದೆ ಪ್ರಸ್ತಾಪನರಾಗಿದ್ದ ಫೀಂಬರ್ಲೇನರು ಹೇಳಿದ್ದಾರೆ.

ಮಾರ್ಷಲ್ ಬಾಲ್ಬೋರವರ ಸಾವು.

ಇಟಲೀ ವಿಮಾನಬಲದ ಸ್ಥಾಪಕರಾಗಿದ್ದ ಮಾರ್ಷಲ್ ಬಾಲ್ಬೋರವರು ಯುದ್ಧದಲ್ಲಿ ಸತ್ತರೆಂದು ಪ್ರಕಟವಾಗಿದೆ. ಇಟಲಿಯ ಸರ್ವಾಧಿಕಾರಿಯಾಗಿದ್ದ ಮುಸೋಲಿನಿಯನರಿಗ ಅಂತರ್ಯ ದ್ವೇಷವಿತ್ತೆಂದು ಒಬ್ಬಲೇಖಕರು ಬರೆಯುತ್ತಾರೆ. ಇವರ ಸ್ಥಳಕ್ಕೆ ಮಾರ್ಷಲ್ ಗ್ರಾಜಿಯಾನಿಯವರು ಹೋಗಿರುತ್ತಾರೆ.

ಜೆರ್ಸಿ ಮತ್ತು ಗುರ್ನಸೆ ದ್ವೀಪಗಳು.

ಇಂಗ್ಲಿಷು ಕಡಲ್ಗಾಲುವೆಯಲ್ಲಿದ್ದ ಈ ದ್ವೀಪಗಳನ್ನು ಜರ್ಮನರು ವಶಪಡಿಸಿಕೊಂಡಿರುವರಂತಲೂ ಅಲ್ಲಿ ಜರ್ಮನರ ಸೈನ್ಯ ಸಂಗ್ರಹವು ಆಗತ್ತಲಿದೆಯೆಂತಲೂ ಸುದ್ದಿಗಳು ಬಂದಿವೆ. ಅಲ್ಲಿದ್ದ 90 ಸಾವಿರ ಜನರು ಇಂಗ್ಲೆಂಡಿಗೆ ಹೋಗರೆ. ಅಲ್ಲಿ ಜರು ಅಗಾಗ್ಯೆ ವಿಮಾನದಾಳಿಯ ಜನರನ್ನು ಕೊಲ್ಲುತ್ತಿದ್ದರಿಂದ ಅವ ಆ ದ್ವೀಪಗಳನ್ನು ಬಿಡಬೇಕಾಯಿ.

ಇಂಗ್ಲೆಂಡಿನ ನೈರುತ್ಯ ಭಾಗದಲ್ಲಿ ಮತ್ತೆ ಮುತ್ತಿಗೆ

ಲಂಡನ್ ಜು. ೯

ಈ ದಿನ ಬೆಳಿಗ್ಗೆ ಇಂಗ್ಲೆಂಡಿನೈರುತ್ಯ ಭಾಗದಲ್ಲಿ ನಾಜಿ ವಿಮಾನಗಳು ಮುತ್ತಿಗೆ ನಡೆಸಿದರು ಬಾಂಬುಗಳನ್ನು ಹೂಕಲಾಯಿತ ಜನರ ನಾಸಕ್ಷೇತ್ರಗಳಲ್ಲಿ ಒಹಳ ನಾವಾಗಿವೆ. ಹಲವರು ಜವಾಯಿಕ ಒಳಗಾದರೆಂದು ನಂಬಲಾಗಿದೆ.

ಇಟಲೀಯವರ ಹಡಗುಗಳ ಮುಳುಗಿಸಲ್ಪಟ್ಟವು.

ಕಳದನಾರ ಇಟಲಿಯವರ ವಿಮಾನಶಕಯುಮೆಡಿಟರೇನಿಯನ್ ಸಮುದ್ರದಲ್ಲಿ ಮುಳುಗಿಸಲ್ಪಟ್ಟಿತು. ಲಿಬ್ಯಾದಲ್ಲಿ ಬ್ರಿಟಿಶ್ ವಿಮಾನದಳವು ಇಟಲೀಯ ನಾವಿಕಾದಳದ ಮೇಲ ಬಾಂಬುಗಳನ್ನು ಸುರಿಸಿ ನಾವೆಗಳನ್ನು ಜಖಂ ಪಡಿಸಿದವು.

ಆರೆಂಡೋರಸ್ಟಾರ್.

ಬ್ರಿಟನ್ನಿನಿಂದ ಕ್ಯಾನಡಾದೇಶಕ್ಕೆ 1500 ನುಂದಿ ಇಟಲಿ ಮತ್ತು ಜರ್ಮನ್ ಬಂದಿಗಳನ್ನು ಕರೆದುಕೊಂಡು ಹೋಗುತ್ತಿದ್ದ ಈ ಹಡಗನು ಮಧ್ಯದಲ್ಲೇ ಮುಳುಗಿಸಲಾಯಿತು. 1000 ಜನರನ್ನು ರಿಸಲಾಯಿತು.

ಬ್ರಿಟಿಷ್ ಮಕ್ಕಳು ಕ್ಯಾನಡಾ ಆಸ್ಟ್ರೇಲಿಯಾಕ್ಕೆ

ಬ್ರಿಟಿಶ್ ಮಕ್ಕಳನ್ನು ಕ್ಯಾನಡಾಕ್ಕೂ ಆಸ್ಟ್ರೇಲಿಯಕ್ಕೂ, ಕಳಿಸುವ ಯೋಜನೆಯು ಜಾರಿಯಲ್ಲಿ ಬಂದಿದೆ. ನಾಫಾಂಪ್ಟನ್‌ದಲ್ಲಿನ್ನ ಇಂಗ್ಲಿಷ್ ಶಾಲೆಗಳನ್ನು ಮುಚ್ಚಿದರು.

ವಿಶಲ ಮುದ್ರಣಾಲಯ

ತೇರು ಬೀದಿ, ಬಳ್ಳಾರಿ.

ಇಂಗ್ಲೀಷು, ಕನ್ನಡ, ತೆಲುಗು ಭಾಷೆಗಳಲ್ಲಿ ಸುಲಭ ದರದಿಂದ ಸಕಾಲಕ್ಕೆ ಮುದ್ರಣಕಾರ್ಯವಾಗುವುದು.

ಭಾರತವನ್ನು ಇಬ್ಭಾಗ ಮಾಡಬೇಕು.

ಜಿನ್ನಾರವರ ಅರಾಷ್ಟ್ರೀಯ ಧೋರಣೆ

ಕಾಂಗ್ರೆಸ್ ವರ್ಕಿಂಗು ಸಮಿತಿಯ ನಿರ್ಣಯದ ಏಚಾರವಾಗಿ ಶ್ರೀ ಎಂ. ಎ. ಜಿನ್ನಾರವರು ಹೇಳಿಕೆ ಕೊಡುತ್ತ.

'ಕಾಂಗ್ರೆಸ್ಸಿನ ಪರವಾಗಿ ಸಂಧಾನ ನಡೆಸಲು ಮಹಾತ್ಮರು ನಿಮ್ಮಲ್ಲಿಕ್ಕೆ ಬರಲಿಲ್ಲ. ಹೇಳಿ ಬರೆಯಿಸುವುದಕ್ಕಾಗಿ ಬಂದರು. ದೆಹಲಿ ನಿರ್ಣಯವೂ ಕೂಡ ಆ ಭಾವನೆಯಿಂದ ಕೂಡಿದುದಾಗಿದೆ. ಕಾಂಗ್ರೆಸ್ ಬೇಡುತ್ತಿರುವ ರಾಷ್ಟ್ರೀಯ ಸರ್ಕಾರವು ಕಾಂಗ್ರೆಸ್ ಪ್ರಭುತ್ವ 'ನ್ಯಾಷನಲ್' ಎಂಬ ಪದವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ಯೂರೋಪ್ ಮತ್ತು ಅಮೇರಿಕ ದೇಶಗಳಲ್ಲಿ ಜನಾಂಗಕ್ಕೆ ಅವಕಾಶವಿಲ್ಲದ ಹಾಗೆ ಭಾರತದಲ್ಲಿಯೂ ಅವಕಾಶವಿಲ್ಲ. ಕಾಂಗ್ರೆಸ್ಸಿನ ಬೇಡಿಕೆಯನ್ನು ನಲ್ಲಿನುವುದಾದರೆ, ಹಿಂದುಗಳ ಪ್ರಭುತ್ವವೇ ನೆಲಸಿದಂತಾಗುವುದು ಅದನ್ನು ಮಹಮ್ಮದೀಯರೆಂದಿಗೂ ಅಂಗೀಕರಿಸುವುದಿಲ್ಲ. ಇದಕ್ಕೆಲ್ಲಾ ತಕ್ಕ ಮದ್ದೆಂದರೆ, ಭಾರತವನ್ನು ಇಬ್ಭಾಗ ಮಾಡುವುದೇ ತಕ್ಕ ಮದ್ದೆಂಬುದು ಮಹಮ್ಮದೀಯರಿಗೆ ಚನ್ನಾಗಿ ವ್ಯಕ್ತವಾಗಿದೆ' ಎಂದರು.

ಫ್ರೆಂಚ್ ರಾಜ್ಯಾಂಗ ಸುಧಾರಣೆ

ಅಂಗೀಕೃತವಾಯಿತು.

ಈ ದಿನ ಸೇರಲಿರುವ ಫ್ರೆಂಚ್ ರಾಷ್ಟ್ರೀಯ ಸಭೆಯ ಮುಂದೆ ಎಂ. ಲವಾಲ್‌ರವರು ಕೆಳಗೆ ಕಂಡ ನಿರ್ಣಯವನ್ನು ಇಡುವರೆಂದು ಸಂಸ್ಥೆಗೆ ಸುದ್ದಿ ಬಂದಿದೆ.

ಫ್ರಾನ್ಸಿಗೆ ಹೊಸ ರಾಜ್ಯಾಂಗ ವ್ಯವಸ್ಥೆಯನ್ನು ರೂಪುಗೊಳಿಸಲು ಈ ಸಭೆಯು ಮಾರ್ಷಲ್ ಪೆಟೆನ್ ಸರ್ಕಾರಕ್ಕೆ ನಿರ್ಣಯಾಧಿಕಾರವನ್ನು ಕೊಡುವುದಾಗಿದೆ. ಈ ರಾಜ್ಯಾಂಗ ವ್ಯವಸ್ಥೆಯಲ್ಲಿ ಕೂಲಿಗಾರರ, ಫ್ರೆಂಚ್ ಸಂಸ್ಥಾನಗಳ ಮತ್ತು ಮಾತೃಭೂಮಿಯ ಹಿತಗಳನ್ನು ಸಂರಕ್ಷಿಸತಕ್ಕದ್ದು ಅಸೆಂಬ್ಲಿ ಸಭೆಯು ರೂಪುಗೊಂಡ ಮೇಲೆ ಅದು ಈ ರಾಜ್ಯಾಂಗ ವ್ಯವಸ್ಥೆಯನ್ನು ಒಪ್ಪಬೇಕು.



Reasonable Rates Guarranteed goods



ಸುಲಭ ಬೆಲೆ ಗ್ಯಾರಂಟಿಯಾದ ವಸ್ತುಗಳು

ಪೆಟ್ರೋಮಾಕ್ಸು ದೀಪಗಳು, ಅವುಗಳ ಚಿಲ್ಲರೆ ಸಾಮಾನುಗಳು Efar ಮತ್ತು B.C.M. ಗುರ್ತಿನ ಪೆಟ್ರೋಮಾಕ್ಸು ಬತ್ತಿಗಳು, ಗ್ಲಾಸು ಸಾಮಾನುಗಳು, ಪ್ಲಾಗಳು. ಟಾರ್ಚ್‌ಲೈಟು, ಬ್ಯಾಟರಿ, ಫಾನ್ಸಿಸ್‌ಕ್ರಾಕ್ಸ್, ಜೀಸ್ ಕನ್ನಡಕಗಳು ಚಿಲ್ಲರೆಯಾಗಿಯೂ, ಸಗಟ್ಟಾಗಿಯೂ, ಸುಲಭ ಬೆಲೆಯಿಂದ ನಮ್ಮಲ್ಲಿ ದೊರೆಯುತ್ತವೆ ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸಿ, ಸರಿಹೊಂದುವ ಕನ್ನಡಕಗಳನ್ನು ಕೊಡುತ್ತೇವೆ.

V. M. ABDUL LATIFF & Co,
237 Brahmins Street, BELLARY.

ವಿ. ಯು. ಅಬ್ದುಲ್ ಲತೀಫ್ & ಕೋ, 237 ಬ್ರಾಹ್ಮಣ ಬೀದಿ, ಬಳ್ಳಾರಿ

ನವಭಾರತದ ಚಂದಾ

3ನೆಯ ವರ್ಷದ ಪ್ರಾರಂಭದಿಂದ 'ನವಭಾರತ'ದ ವಾರ್ಷಿಕ ಚಂದಾ 3/-ರೂಗಳಿಗೆ ಏರಿಸಲಾಗಿದೆ ಯುದ್ಧ ಮತ್ತು ಆರ್ಥಿಕ ಪರಿಸ್ಥಿತಿಗಳಿಂದ ಹೀಗೆ ಮಾಡಲು ಬಂದುವಕ್ಕೆ - ವಿಷಾದಿಸುತ್ತೇವೆ. ನಮ್ಮ ಹಳೆಯ ಚಂದಾದಾರರ ಕಾಲಾವಧಿ ಮುಗಿಯುವ ವರಿಗೂ ಅವರು ಬೇರೆಕೂಡ ಬೇಕಾಗಿಲ್ಲ. ಹೊಸದಾಗಿ ಆಗುವ ಚಂದಾದಾರರು 3/- ರೂ. ಕೂಡಬೇಕು ಉಪಾಧ್ಯಾಯರಿಗೂ - ಸಾರ್ವಜನಿಕ ಸಂಸ್ಥೆಗಳಿಗೂ 2-8-0 ವಾರ್ಷಿಕ ಚಂದಾ ಇಡಲಾಗಿದೆ.

ವ್ಯವಸ್ಥಾಪಕ.

ಉಪಾಧ್ಯಾಯರಿಗೆ -- ಸೂಚನೆ

ನವಭಾರತವನ್ನು ತಪ್ಪದೆ ಓದಿರಿ.

ಹೊಸ ಪಾಠ ಪದ್ಧತಿಯ ಪ್ರಕಾರ - ರಿಪ್ಪನ್ ಕೋರ್ಸಿನಲ್ಲಿ ನಡೆದ ಪಾಠಗಳ ವಿವರ - ಮತ್ತು ಇತರ ವಿಶೇಷಗಳನ್ನು ವಾರ ವಾರವೂ ತಪ್ಪದೆ ಪ್ರಕಟಿಸಲು ಏರ್ಪಾಟಾಗಿದೆ. ಈ ಕಾರಣ ನವಭಾರತವನ್ನು ತಪ್ಪದೆ ಓದಲು ಪ್ರಾರ್ಥನೆ.

ಸಂಪಾದಕ.

ಬಳ್ಳಾರಿಜಿಲ್ಲಾ ಹರಿಜನ ಸೇವಕ ಸಂಘ.

(ಸ್ಥಾಪಿಕ:- ಸೆಪ್ಟಂಬರು ೧೯೩೮)

1940ರ ಅಧಿಕಾರೀವರ್ಗ.

ಅಧ್ಯಕ್ಷ:- ಟಿ. ರಾ ಘ ವ.
ಉಪಾಧ್ಯಕ್ಷ:- ಯಸ್. ವಿ. ಶೆಟ್ಟಿ.

ಕಾರ್ಯದರ್ಶಿಗಳು 1) ಜಿ. ನಾಗಭೂಷಣಂ. 2) ಟಿ. ಬಿ. ಕೇಶವರಾವ್. 8ಜನರ ಕಾರ್ಯಕಾರಿಣೀ ಸಮಿತಿಯೊಂದಿದೆ. ಅಖಿಲ ಭಾರತ ಹರಿಜನ ಸೇವಕ ಸಂಘದ ನಿಯಮ ನಿಬಂಧನೆಗಳಿಗೊಳಪಟ್ಟು - ಕರ್ನಾಟಕ ಪ್ರಾಂತೀಯ ಹರಿಜನ ಸೇವಕಸಂಘದ ಅಧೀನದಲ್ಲಿ ಈಸೇವಕ ಸಂಘವು ಕೆಲಸ ಮಾಡುತ್ತಲಿದೆ

ಕಾರ್ಯಪ್ರಣಾಲಿ. ಮಾದಿಗ ಡೊಲೆಯ . ಸಂಚಿನು - ಆದಿಆಂಧ್ರ ಆದಿಕರ್ನಾಟಕ - ಆದಿದ್ರಾವಿಡ ಎಂಬುವ 86ತರಹೆ ಅಸ್ಪೃಶ್ಯ ಕುಲದವರೆಂಬುವರ ಅರ್ಥಾತ್ ಗಾಂಧಿ ಯುವರ ಶಬ್ದದಲ್ಲಿ ಹರಿಜನರೆಂಬುವರ ಆರ್ಥಿಕ, ಸಾಮಾಜಿಕ - ನೈತಿಕಾಭಿವೃದ್ಧಿಯನ್ನು ಸರ್ವ ವಿಧಗಳಿಂದಲೂ ಮಾಡಿ - ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು. ಸರಕಾರ ಸಾರ್ವಜನಿಕ ಸಹಾಯಗಳಿಂದ ಕುಡಿಯುವ ನೀರಿನ ಕೊರತೆಯನ್ನು ಹೋಗಲಾಡಿಸಿ ಭಾವಿಗಳನ್ನು ಅಗಿಸುವಿಕೆ, ವಿದ್ಯಾಭ್ಯಾಸಕ್ಕೆ ಸವರ್ಣ ಹಿಂದೂಶಾಲೆಗಳಲ್ಲಿ ಏರ್ಪಡಿಸುವುದು. ಅನಾನುಕೂಲ ಪ್ರದೇಶಗಳಲ್ಲ ಪ್ರತ್ಯೇಕ ಶಾಲೆಗಳನ್ನೂ ಹಾಸ್ಟಲ್‌ಗಳನ್ನೂ ತೆಗೆಯುವುದು. ಭೂಮಿಗಳಿಲ್ಲದವರಿಗೆ ಪರಂಬೋಕು ಭೂಮಿಗಳನ್ನು ಕೊಡಿಸುವುದು, ಅನ್ಯಾಯ ಸಾಲಗಳ ವಿಮರ್ಶನೆ, ಜುಲುಂಕೃತ್ಯಗಳಿಂದ ಹರಿಜನರನ್ನು ಪಾರುಮಾಡುವುದು, ಮನೆಕಟ್ಟಿಕೊಳ್ಳಲು ಆರೋಗ್ಯಕರ ನಿವೇಶನಗಳನ್ನು ಕೊಡಿಸುವುದು. ಮುನಿಸಿಪಾಲ್ಟಿಗಳಲ್ಲಿರುವ ತೋಟಿ ಕಸಗುಡಿಸುವವರ ಪರಿಸ್ಥಿತಿಯನ್ನು ಎಲ್ಲಾ ವಿಧಗಳಿಂದ ಸುಧಾರಿಸುವುದು-ಮುಂತಾದವೈ

ಈ 8 ವರ್ಷಗಳಲ್ಲಿ ಸಂಘವು 7 ಭಾವಿಗಳನ್ನು ತೋಡಿಸಿದೆ. ಇನ್ನೂ 5 ಭಾವಿಗಳ ಕಾರ್ಯವು ಸಾಗಿದೆ. 5 ಶಾಲೆಗಳನ್ನುನಡೆಸಿ ಸರಕಾರಕ್ಕೆ ಸೇರಿಸಿತು. ಎರಡು ವಿದ್ಯಾರ್ಥಿ ನಿಲಯಗಳನ್ನುನಡೆಸಿತು. ಬಡಹುಡುಗರಿಗೆ ವೇತನಗಳನ್ನು ಕೊಟ್ಟಿತು. ಈಗ ಇಬ್ಬರು ಹರಿಜನಸೇವಕ ಸಂಘದ ವೇತನ ಹೊಂದಿ B. A. ತರಗತಿಯಲ್ಲಿ ಓದುತ್ತಿರುವರು. ಇಂಡಸ್ಟ್ರಿಯಲ್ ಶಿಕ್ಷಣಕ್ಕೆ ಸಂಘವು ವೇತನಗಳ ಮೂಲಕ ಪ್ರೋತ್ಸಾಹ ಕೊಡುತ್ತಲಿದೆ.

ಮಹಾತ್ಮಗಾಂಧಿಯವರು ಬಳ್ಳಾರಿ ಜಿಲ್ಲೆ ಸಂಚಾರಕ್ಕೆ ಬಂದಾಗ ಅವರಿಗೆ 5300 ರು. ಹರಿಜನ ನಿಧಿಯನ್ನು ಕೊಡಲಾಗಿತ್ತು. ಅದು ದೆಹಲಿಯಿಂದ ನಮಗೆ 1/4 ಭಾಗದ ಖರ್ಚು ಗ್ಯಾಂಟು ರೂಪದಲ್ಲಿ ಬಂದಿತು. ಈ 8 ವರ್ಷಗಳಲ್ಲಿ 12 ಸಾವಿರ ರೂ, ಹರಿಜನಾಭಿವೃದ್ಧಿಗಾಗಿ ಖರ್ಚಾಗಿದೆ. ಸಂಘದ ಪ್ರಚಾರಕರು ಕಾರ್ಯದರ್ಶಿಗಳು ಜಿಲ್ಲೆಯಲ್ಲಿನ 2/3 ಭಾಗದ ಹಳ್ಳಿಗಳನ್ನು ಸಂದರ್ಶಿಸಿ ಜಾಗೃತಿಮಾಡಿರುವರು.

ಕಾಂಗ್ರೆಸ್ ಸರಕಾರವು ಬಂದ ಮೇಲೆ ಕಲೆಕ್ಟರ್ ಅಧ್ಯಕ್ಷತೆಯಲ್ಲಿ ಹರಿಜನೋದ್ಧಾರ ಸಲಹೆ ಸಮಿತಿಯು ಏರ್ಪಾಟಾಗಿದೆ. ಅದರಲ್ಲಿ ಈ 3 ವರ್ಷಗಳಿಂದ ಕಾರ್ಯದರ್ಶಿಗಳಿರುವರು. ಅವರ ಸಲಹೆಗಳನ್ನು ಕಲೆಕ್ಟರ್‌ರವರು ಸಭೆಯಲ್ಲಿ ಸ್ವೀಕರಿಸಿ ತಕ್ಕ ಚರ್ಯೆಯನ್ನು ತೆಗೆದುಕೊಳ್ಳುವರು.

ಕಾಶ್ಮೀರರುಕ್.

(ಮನೆಯ ವೈದ್ಯ)

ಅಪಾಯಕರವಾದ ಕೆಮ್ಮು, ನೆಗಡಿ, ಉಬ್ಬಸ, ಅಜೀರ್ಣ, ಶೀತ, ಭೇದಿ, ಛಳಿಜ್ವರ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ. ಛಳಿ, ಜ್ವರ ಮುಂತಾದ ಕಡಿತಗಳಿಗೂ ನೈಮೇಲಿನ ಎಲ್ಲಾ ನೋವುಗಳಿಗೂ, ಕೀಲು ಶೂಲೆಗಳಿಗೂ ದಿವ್ಯೌಷಧ. ಔಷಧದ ಜೊತೆಗೆ ಅನುಪಾನ ಪತ್ರ.

.... ಏಜಂಟರು ಬೇಕು. ....

ಬಳ್ಳಾರಿಯ ಮಲ್ಲಾ ಅಂಗಡಿಗಳಲ್ಲೂ ದೊರೆಯುತ್ತೆ.

ಹೆಚ್. ಯಸ್. ಅಂಡು ಸನ್ಸು, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.



ಓದುವದಕ್ಕೂ, ದೂರದೃಷ್ಟಿಗೂ ಕನ್ನಡಕಗಳನ್ನೂ, ಬಿಲಿಸಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಿಗಳನ್ನೂ, ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ "ಕಟ್ಟು" [ಫ್ರೇಂ] ನಮ್ಮಲ್ಲಿವೆ. ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons Bellary.

ನವಜೀವನ ವ್ಯಾಯಾಮ ಶಾಲೆ ಬಳ್ಳಾರಿ

ಸ್ಥಾಪಿತ-1933.

1940 ರ ಅಧಿಕಾರಿವರ್ಗ.

ಅಧ್ಯಕ್ಷ— ಗಾಳಿ ಕರಿಬಸಪ್ಪ.
ಉಪಾಧ್ಯಕ್ಷ— ಜೆ. ಭೀಮಪ್ಪ ಚೌಧರಿ
ಡೈರೆಕ್ಟರ್— ಡಿ. ರಾಮಮೂರ್ತಿ
ಕಾರ್ಯದರ್ಶಿಗಳು— [1] ಅಬಿದೀನ್ [2] ಶೀತಾರಾಮಶೆಟ್ಟಿ ಸೊಂತಾ
ಸಂಘಟಕರು- [1] ಡಿ ಯಜ್ ವೆಂಕೊಬ ರಾವು
(2) ಯಸ್. ರಾಜಗೋಪಾಲ
ಖಜಾನ್ಚಿ— ಯಸ್. ಚನ್ನ ವೀರಭದ್ರಪ್ಪ ಶೆಟ್ಟಿ.
ಶಿಕ್ಷಣಕೊಡುವವರು—
(1) ಯಸ್ ನಾಗೇಶರಾವು
(2) ಡಿ. ನಾಗರಾಜರಾವು
(3) ಯಸ್. ಕೆ. ರಾಮಾಚಾರ್
ಲೆಕ್ಕ ತಪಾಸಿಗರು—
ಡಿ. ವಿ. ಸರೋವರ
ಕಾರ್ಯ ಕಾರಿಣಿ ಸಮಿತಿ—
ಮು ಗಂಗಪ್ಪ ಚೌದರಿ
ಮು. ನಾಗೋಜಿರಾವು
ಟಿ. ಬಿ. ಕೇಶವರಾವು.
ಟಿ. ಜಿ. ಸತ್ಯನಾರಾಯಣ
ಕೆ ನರಸಿಂಹಮೂರ್ತಿ
ಎಂ. ರಾಮಣ್ಣ
ಪಿ. ಗೊ. ವಿಂವಪ್ಪಶೆಟ್ಟಿ
ವಿ. ಗೋಪಾಲರಾವು
ಬಿ. ಆರ್. ಶಂಕರ್
ಜಿ. ಮುನ್ನೆಯ್ಯ
ಶಿಸಾ-ದೊಡ್ಡಬಸಪ್ಪ
ಆರ್. ಯಸ್ ಗುತ್ತ

ಈ ಸಂಸ್ಥೆಯು 1933 ರಲ್ಲಿ ಸ್ಥಾಪಿತವಾಯಿತು. ಸ್ವದೇಶಿ ಪ್ರದರ್ಶನಕ್ಕಾಗಿ ಬಂದ ಶ್ರೀ ವಾಸುದೇವರಾಯರೂ, ಇತರ ಮಿತ್ರರೂ ಈ ಸಂಸ್ಥೆಯ ಸ್ಥಾಪನೆಯ ಕಾರ್ಯದಲ್ಲಿ ಪ್ರಮುಖ ಭಾಗವನ್ನು ವಹಿಸಿದರು.

ಉದ್ದೇಶ:— ನಾಡಿನ ಯುವಕರ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಲಕ್ಷಕೊಟ್ಟು ಅವನನ್ನು ದೇಶ ಕಲ್ಯಾಣಕ್ಕೆ ಯೋಗ್ಯನನ್ನಾಗಿಮಾಡುವುದು.

ಆದಿಯಿಂದಲೂ ಶ್ರೀ ರಾಮಮೂರ್ತಿಯವರು ಉತ್ಸಾಹದಿಂದ ಸಂಸ್ಥೆಯ ವಿಚಕ್ಷಣೆ ಮಾಡುತ್ತಲಿರುವರು. ಇವರು ಮದ್ರಾಸಿನ ವೈ. ಯು. ಶಿ. ಎ. ದಲ್ಲಿ ಶಿಕ್ಷಣಹೊಂದಿರುವರು. ಪ್ರಾರಂಭದಲ್ಲಿ 4—5 ಸಂಖ್ಯೆ ಇದ್ದು ಈಗ ಹಾಜರಿಯು 50ಕ್ಕೆ ಹೋಗಿದೆ 7—8 ವರ್ಷ ವಯಸ್ಸಿನಿಂದ ಪ್ರಾರಂಭವಾಗಿ 25—30 ವರ್ಷ ವಯಸ್ಸಿನವರೂ ಸಂಸ್ಥೆಯಲ್ಲಿ ಶಿಕ್ಷಣಹೊಂದುತ್ತಿರುವರು ಇಲ್ಲಿ ಪೂರ್ವಾರ್ತ್ಯ ಸಾಷ್ಟಿಮಾತ್ಯ ವ್ಯಾಯಾಮ ಶಿಕ್ಷಣವು ಕೊಡಲಾಗುತ್ತಲಿದೆ.

ಈ ಆರು ವರ್ಷಗಳ ವಾರ್ಷಿಕೋತ್ಸವಗಳಲ್ಲಿ ಸುಪ್ರಸಿದ್ಧ ಮಹನೀಯರು ಅಧ್ಯಕ್ಷರಾಗಿ ಕಾರ್ಯಕ್ರಮಗಳನ್ನು ನೆರವೇರಿಸಿದರು. ಕಾಂಗ್ರೆಸ್ ಮಂತ್ರಿವರ್ಗದಲ್ಲಿದ್ದ ಪ್ರಧಾನಮಂತ್ರಿ ರಾಜಗೋಪಾಲಾಚಾರ್ಯರೂ, ರಾಮನಾಥ್‌ರೂ, ಡಾ॥ ಸುಬ್ಬರಾಯರನ್ನೂ, ಇತರ ಪ್ರಮುಖರಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ, ದಿವಾಕರ ಅಂಡ್ರೂಸ್ ಫಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಎಂ. ಬಿ. ಸೆಟ್ಟಿ, ಜಗದಲ್ಲಿ ಶ್ರೇಷ್ಠವಸ್ತಾದ ಗಾಮಾ, ಅವನ ಶಿಷ್ಯರಾದ ಇಮಾಂ ಬಕ್ಷ - ಹವಿೂದ ವನೈರೇ ಮಹನೀಯರು ಈ ಸಂಸ್ಥೆಗೆ ಸಂದರ್ಶನವಿತ್ತು ಆಶೀರ್ವದಿಸಿರುವರು.

ಈ ಸಂಸ್ಥೆಗೆ ವ್ಯಾಯಾಮಕ್ಕೆ ಬೇಕಾದ ಉಪಕರಣಗಳನ್ನೂ, ಉತ್ತೇಜನಪೂರ್ವಕವಾಗಿ ಕಪ್ - ಮೆಡಲುಗಳನ್ನೂ ಪ್ರತಿವರ್ಷವೂ ಅನೇಕ ಮಹನೀಯರು ಈ 6 ವರ್ಷಗಳಲ್ಲಿ ಕೊಟ್ಟಿರುವರು. ಸ್ಥಳಾಭಾವದ ಮೂಲಕ ಅವರ ಹೆಸರುಗಳನ್ನು ಇಲ್ಲಿ ಪ್ರಕಟಿಸಲು ಸಾಧ್ಯವಿಲ್ಲದುದಕ್ಕೆ ವಿಷಾದಿಸುತ್ತೇವೆ. ಹಿಂದೆ ಕೊಟ್ಟವರಿಗೂ ಮುಂದೆ ನಮ್ಮನ್ನು ಪ್ರೋತ್ಸಾಹಿಸಲಿರುವವರಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸುತ್ತೇವೆ ಈ 6 ವರ್ಷಗಳು ಶ್ರೀಗುರುನಿವಾಸ ಸಂಸ್ಕೃತ ಹೈಸ್ಕೂಲಿನ ಶಾಲೆಯರು ನಮಗೆ ವ್ಯಾಯಾಮ ಮಾಡಿಕೊಳ್ಳಲು ಸ್ಥಳವಿತ್ತು ಕೃಪಾಶ್ರಯ ಕೊಟ್ಟದ್ದಕ್ಕೆ ಆವರಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು.

ಲೇಟ್ ಶ್ರೀ ಗೋಪಾಲಸ್ವಾಮಿ ಮೊದಲಿಯಾರ್‌ರವರು ಸಂಸ್ಥೆಯ ಕಟ್ಟಡಕ್ಕಾಗಿ 500 ರೂ. ವಾಗ್ದಾನ ಮಾಡಿದ್ದರು. ಅದನ್ನು ಅವರ ಮಕ್ಕಳು ಪೂರ್ಣಮಾಡಿ ತಂದೆಯವರ ವಾಗ್ದಾನವನ್ನು ಸಂಪೂರ್ತಿಮಾಡುವರೆಂದು ಆಶಿಸುತ್ತೇವೆ.

ಸಂಘದ ಲೆಕ್ಕಗಳು ಪ್ರತಿವರ್ಷವೂ ಲೆಕ್ಕ ತಪಾಸಿಗರಿಂದ ವಿಮರ್ಶಿತವಾಗಿ ವರದಿಯೊಂದಿಗೆ ಪ್ರಕಟವಾಗುತ್ತವೆ.

ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಸಂಘವೊಂದಿದೆ. ಅವರ ಮಾನಸಿಕ ಬೆಳವಣಿಗೆಗಾಗಿ ಆಗಾಗ್ಗೆ ಅವರಲ್ಲೇ ಸಂಭಾಷಣಸ್ಪರ್ಧೆ, ವಿವಿಧ ವಿಷಯಗಳಮೇಲೆ ಉಪನ್ಯಾಸ ಏರ್ಪಡಿಸಲಾಗುವುದು. ಅವರಲ್ಲೇ ಅಧ್ಯಕ್ಷ-ಉಪನ್ಯಾಸಕರು ಏರ್ಪಡುವರು.

ಈ ಸಂಸ್ಥೆಯವರು ಜಿಲ್ಲೆಯ ವಿವಿಧ ಭಾಗಗಳಲ್ಲಿ ಅನೇಕ ಪ್ರಮುಖೋತ್ಸವಗಳಲ್ಲಿ ತಮ್ಮ ಪ್ರದರ್ಶನ ನಡೆಸಿ ಜನತೆಯ ಆದರ ಆನಂದಗಳಿಗೆ ಪಾತ್ರರಿರುವರು.

ಇಂಥಾ ಸಂಸ್ಥೆಗೆ ಜನರು ತನು ಮನ ಧನಗಳಿಂದ ಸಹಾಯಮಾಡಿ ಹೆಚ್ಚಿನ ಅಭಿವೃದ್ಧಿಮಾಡಿ ದೇಶದ ಏಳ್ಗೆಗೆ ಆಕರವಾದ ಯುವಕರ ದೈಹಿಕ ಮಾನಸಿಕ ಶಿಕ್ಷಣಕ್ಕೆ ಸಹಾಯ ಮಾಡುವರೆಂದು ನಂಬಿದ್ದೇವೆ.

Dr. K. R. GOPAL L.M.P.

Physician & Surgeon,

C/o Medical Emporium

Bangalor Road,

BELLARY

ಬಳ್ಳಾರಿ ಜಿಲ್ಲಾ ಬೋರ್ಡು.

